ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೭ ಸೆಪ್ಟಂಬರ್-೨೦೧೬ ಸಂಚಿಕೆ - ೨

ಸತ್ಯಾಗ್ರಹ ಮತ್ತು ಪ್ರಜಾಪ್ರಭುತ್ವ

*

ನಮ್ಮೂರಿನ ಯೆತ್ನಳ್ಳ ಹೊಳೆಯಾದುದು

*

ಕೈವಲ್ಯಸಿದ್ಧಿ ಹೇಗೆ?

*

ಪ್ರೊ|| ಕೆ.ಶ್ರೀನಿವಾಸನ್; ಒಂದು ಮಧುರ ನೆನಪು

ಜನಪದ ವಿಚಾರದಲ್ಲಿ

ಸೆಪ್ಟಂಬರ್- ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಸೆಪ್ಟಂಬರ್ - ೨೦೧೬
ಸಂಪುಟ - ೧೭
ಸಂಚಿಕೆ - ೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ವಾಸ್ತವ

ಬತ್ತಿದಾ ಕೆರೆಯಂಗಳದಲ್ಲಿ
ಹಾರು ಹಕ್ಕಿಗಳು ಸಾಯುತಿವೆ...
ಕ್ರೂರ ವನ್ಯಜೀವಿಗಳು
ನಗರ ಪಟ್ಟಣಗಳತ್ತ ನುಗ್ಗುತ್ತಿವೆ...
ವಯೋಮಾನವ ಲೆಕ್ಕಿಸದೆ
ಹೆಣ್ಣು ಜೀವಗಳ ಮೇಲೆ ದೌರ್ಜನ್ಯ
ನಡೆಯುತಿದೆ...
ಭೂಮಾತೆಯ ಮೇಲೆ
ನಿಲ್ಲದಾ ಕ್ರೌರ್ಯ ಸಾಗುತಿದೆ...
ಪ್ರಕೃತಿಯ ಸಮತೋಲನ ತಪ್ಪುತದೆ...
ಅನೂಹ್ಯ ಘೋರ ಕೃತ್ಯಗಳ ಸರಮಾಲೆ!
ಏಕೆ ಹೀಗೆ? ಹೀಗೇಕೆ?
ಎಂದು ಇದರ ಕೊನೆ?
ಅಸಹಜ ಆಶಾಸಾಗರದ
ದೈತ್ಯದಲೆಗಳಿಗೆ ಸಿಲುಕಿ,
ನರ ತನ್ನರಿವ ಮರೆತುದುಕೊ?
ದೇವ ಮಾನವನಾಗಬೇಕಾದ ನರ,
ಹೀನ ದಾನವನಾಗುತ್ತಿರುವುದಕೊ?
ಪ್ರಕೃತಿಯನ್ನು ವಿಕೃತಿಯಾಗಿಸುತ
ದುರಾಸೆ ದೈತ್ಯನ ವಿಕಟಾಟ್ಟಹಾಸದ
ಭೂತ ಕುಣಿತದ
ಕೈಗೊಂಬೆಯಾಗಿರುವುದಕೊ?
ಇದರ ಕೊನೆ ಎಂದು?
ಪ್ರಕೃತಿಯನ್ನು ಸಂಸ್ಕೃತಿಯಾಗಿಸುತ,
ಸಂಸ್ಕೃತಿಯನು ಸತ್ಕೃತಿಯಾಗಿಸುವಂದು,
'ಮೇರು ಚಿಂತನ', 'ಸರಳ ಜೀವನ'ದ
ಮಹತ್ವವನರಿತಂದು,
ಮಹಾನುಭಾವಿಗಳ ಸಾರ್ಥಕ ಜೀವನದ
ಸಾರಸರ್ವಸ್ವದ ಸಾರಹೀರಿ,
ಸ್ವೋಪಜ್ಞನಾದಂದು,
ಕಂಗೊಳಿಸಬಹುದು ಈ ಧರೆಯಲಿ
ದೈವತ್ವದ ಅಮೃತ ಬಿಂದು ಬಿಂದು!

-ಜಿ.ಕೆ.ಗಾಯಿತ್ರಿ
(ಸಾಬಾರ: ಅಕ್ಷಯ ವಾರ್ತೆ)

ಚಿಂತನೆಗೊಂದು ಸಂಗತಿ

ವೈರುಧ್ಯ

ಇಂದಿನ ಕಾಲ ವೈರುಧ್ಯದ ಕಾಲ. ಮಾತು ಒಂದು ರೀತಿಯದಾದರೆ ಕೃತಿಯೊಂದು ಬೇರೆ ರೀತಿಯದು. ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯ ಮೂಲಕ ಕೊಡುವ ಶಿಕ್ಷಣ ಮಕ್ಕಳಿಗೆ ಶ್ರೇಯಸ್ಕರವೆಂಬ ವಿಚಾರವಿದ್ದಾಗ್ಯೂ ಇಂಗ್ಲೀಷ್ ಮಾಧ್ಯಮದ ಶಾಲೆಗಳು ನಾಯಿಕೊಡೆಗಳಂತೆ ಹುಟ್ಟುತ್ತಲೇ ಇವೆ. ಅರಣ್ಯ ಅತ್ಯಗತ್ಯವೆಂದು ಹೇಳುತ್ತಲೇ ಅರಣ್ಯ ನಾಶ ಅಹರ್ನಿಶಿ ನಡೆಯುತ್ತಲೇ ಇವೆ. ವಿಜ್ಞಾನದಿಂದ ಜಗತ್ತು ಒಂದು ಗ್ರಾಮವಾಗಿದೆ ಎಂದು ಹೇಳುತ್ತಲೇ ಜಗತ್ತಿನಲ್ಲಿ ರಾಷ್ಟ್ರ- ರಾಷ್ಟ್ರಗಳ ಮಧ್ಯೆ ಯುದ್ಧಗಳಾಗುತ್ತಲೇ ಇವೆ. ಎರಡು ಮಹಾಯುದ್ಧಗಳಿಂದ ತತ್ತರಿಸಿದ ಭೂಲೋಕಕ್ಕೆ ಶಾಂತಿಬೇಕು ಎಂದು ಎಲ್ಲ ದೇಶಗಳು ಬಯಸುತ್ತಲೇ ಕ್ಷಣಾರ್ಧದಲ್ಲಿ ಭೂಮಂಡಲ ಭಸ್ಮವಾಗುವಂಥ ಶಸ್ತ್ರಾಸ್ತ್ರಗಳನ್ನು ಸಂಗ್ರಹ ಮಾಡುತ್ತಿವೆ. ಧರ್ಮ ಭಾವನೆಯಿಂದ ಮಾನವ ಸಂಬಂಧ ಉತ್ತಮಗೊಳ್ಳುತ್ತದೆಂಬ ವಿಚಾರವಿದೆ. ಆದರೆ ಈಗ ಅದೇ ಧರ್ಮ ಭಾವನೆ ಪೈಶಾಚಿಕವಾಗಿ ನರಹತ್ಯೆ ಮಾಡುತ್ತಿದೆ. ಇದೆ ದಾಟಿಯಲ್ಲಿ ವೈರುಧ್ಯದ ಒಂದು ಮಾತು ಮುನ್ನಲೆಗೆ ಬಂದಿದೆ. ಶಾಂತಿ ಸ್ಥಾಪನೆಯ ಕಾರ್ಯಕ್ಕಾಗಿ ನೋಬಲ್ ಶಾಂತಿ ಪುರಸ್ಕಾರವನ್ನು ಪಡೆದ ೧೦೦ ನೊಬೆಲ್ ಶಾಂತಿ ಪುರಸ್ಕಾರ ವಿಜೇತರು ಅಶಾಂತಿಗೆ ಕಾರಣವಾಗುವಂಥ ಸಂಶೋಧನೆಯ ಸಮರ್ಥನಾ ಪತ್ರಕ್ಕೆ ಹಸ್ತಾಕ್ಷರ ಹಾಕಿದ್ದಾರೆ! ಕುಲಾಂತರಿ ಬೀಜಗಳು ಮಾಡುತ್ತಿರುವ ಅವಾಂತರಗಳನ್ನು ಕಡೆಗಣಿಸಿ ಅವುಗಳನ್ನು ಸಮರ್ಥಿಸಿ ಈ ಶಾಂತಿ ಪುರಸ್ಕಾರ ವಿಜೇತರು ಸಂಯುಕ್ತ ರಾಷ್ಟ್ರಸಂಘಕ್ಕೆ ಪತ್ರ ಬರೆದಿರುವುದು ಆಘಾತಕಾರಿ ಸಂಗತಿಯಾಗಿದೆ. ಗ್ರೀನ್ ಪೀಸ್ ಎಂಬ ಅಂತರಾಷ್ಟ್ರೀಯ ಸ್ವಯಂ ಸೇವಾ ಸಂಸ್ಥೆಯು ಕುಲಾಂತರಿ ಬೀಜಗಳ ವಿರುದ್ಧ ನಡೆಸುತ್ತಿರುವ ಹೋರಾಟವು ದಾರಿತಪ್ಪಿಸುವಂಥಾದ್ದೂ ಮತ್ತು ಅವೈಜ್ಞಾನಿಕವಾದುದ್ದೂ ಎಂದು ಅವರು ವಿಶ್ವಸಂಸ್ಥೆಗೆ ದೂರು ಕೊಟ್ಟಿದ್ದಾರೆ. ತನ್ಮೂಲಕ ಕುಲಾಂತರಿ ಬೀಜಗಳನ್ನು ಉತ್ಪಾದಿಸುವ ಬಹುರಾಷ್ಟ್ರೀಯ ಕಂಪನಿಗಳಿಗೆ ತಮ್ಮ ಸಮರ್ಥನೆ ಕೊಟ್ಟಿದ್ದಾರೆ. ಮಾನವ ಕುಲಕ್ಕೆ ಆಗುವ ಅಪಾಯವನ್ನು ನೊಬೆಲ್ ಶಾಂತಿ ಪುರಸ್ಕಾರವನ್ನು ಪಡೆದವರು ಮರೆತಿದ್ದಾರೆ. ಇದು ಈ ಕಾಲದ ವೈರುಧ್ಯದ ಪರಮಾವಧಿಯ ಉದಾಹರಣೆ.

ಸತ್ಯಾಗ್ರಹ ಮತ್ತು ಪ್ರಜಾಪ್ರಭುತ್ವ

– ಸುರೇಂದ್ರ ಕೌಲಗಿ

ಎಂದಿಗಿಂತ ಇಂದು ಸತ್ಯಾಗ್ರಹದ ತೀವ್ರ ಅವಶ್ಯಕತೆ ಇದೆ. ಪ್ರಜಾಪ್ರಭುತ್ವದಲ್ಲಿ ಅಹಿಂಸಾತ್ಮಕ ಪ್ರತಿಭಟನೆಯ ಏಕೈಕ ಸಾಧನ ಸತ್ಯಾಗ್ರಹ. ಅದು ತನ್ನ ಹರಿತವನ್ನು ಕಳೆದುಕೊಳ್ಳುತ್ತಿರುವುದು ಚಿಂತೆಯ ವಿಷಯವಾಗಿದೆ. ಹದಿನಾರು ವರ್ಷಗಳಿಂದ ಉಪವಾಸ ಮಾಡಿದ್ದರೂ ಬೇಡಿಕೆ ಕೈಗೂಡಲಿಲ್ಲವೆಂದು ಅವರಿಗೆ ಅನಿಸಿ ಐರೋಮ್ ಶರ್ಮಿಳ ತಮ್ಮ ಸತ್ಯಾಗ್ರಹ ಪ್ರತಿಭಟನೆಯನ್ನು ನಿಲ್ಲಿಸಿದ್ದಾರೆ. ಅದಕ್ಕೆ ಅವರು ಕೊಟ್ಟ ಕಾರಣವನ್ನು ನಾಗರೀಕ ಸಮಾಜ ಗಂಭೀರವಾಗಿ ಪರಿಗಣಿಸಬೇಕಿದೆ. ಅವರ ಪ್ರಕಾರ ಉಪವಾಸದ ಸಂದರ್ಭದಲ್ಲಿ ರಾಜಕಾರಣಿಗಳು ಮತ್ತು ನಾಗರೀಕ ಸಮಾಜವು ಅವರಿಗೆ ಪ್ರೋತ್ಸಹದಾಯಕವಾಗಿ ಪ್ರತಿಕ್ರಿಯಿಸಲಿಲ್ಲ. ಅವರಿಗೆ ಆ ಸಂದರ್ಭದಲ್ಲಿ ಅಗತ್ಯವಾಗಿ ಬೇಕಿದ್ದ ನೈತಿಕ ಬೆಂಬಲ ಸಾಲದೆ ಬಂತು. ದೇಶದ ನಾಗರೀಕರು ಐರೋಮ್ ಶರ್ಮಿಳಾರವರ ಉಪವಾಸದ ವಿಷಯ ತಮಗೆ ಸಂಬಂಧಿಸಿಲ್ಲವೆಂದು ತಿಳಿದು ಅವರ ಉಪವಾಸದ ಬಗ್ಗೆ ಗಂಭೀರ ಮೌನವನ್ನು ತಾಳಿತು. ಒಂದುವೇಳೆ ಅವರ ಆ ಉಪವಾಸದ ವಿಷಯುವನ್ನು ದೇಶದ ಎಲ್ಲ ಸಾರ್ವಜನಿಕ ಜನಪರ ಹೋರಾಟದ ಸಂಘಟನೆಗಳು ಕೈಗೆತ್ತಿಕೊಂಡು ಜನತೆಯಲ್ಲಿ ಜಾಗೃತಿ ಉಂಟುಮಾಡುವುದರ ಮೂಲಕ ನೈತಿಕ ಸಮರ್ಥನೆಯನ್ನು ಕೊಟ್ಟಿದ್ದರೆ ಶರ್ಮಿಳಾ ಚಾನುರವರ ಉಪಮಾಸ ಸತ್ಯಾಗ್ರಹಕ್ಕೆ ಬಲಬರುತ್ತಿತ್ತು. ಆಗ ಸರ್ಕಾರವು ತನ್ನ ತಪ್ಪು ನೀತಿಯ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯತೆ ಉಂಟಾಗುತ್ತಿತ್ತು. ಯಾವ ರೀತಿ ಭ್ರಷ್ಟಾಚಾರದ ವಿರುದ್ಧ ಅಣ್ಣಾಹಜಾರೆಯವರ ನೇತೃತ್ವದಲ್ಲಿ ಜನಾಂದೋಲನ ನಡೆಯಿತೋ ಅದೆ ಮಾದರಿಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯ ಸರ್ಕಾರದ ಕ್ರಮದ ವಿರುದ್ಧ ಸಾತ್ವಿಕ ಪ್ರತಿಭಟನೆ ಉಂಟಾಗಿದ್ದರೆ ಸತ್ಯಾಗ್ರಹವೆಂಬ ನಾಗರೀಕ ಅಹಿಂಸಾತ್ಮಕ ಪ್ರತಿಭಟನಾ ಹಕ್ಕಿಗೆ ಬಲಬರುತ್ತಿತ್ತು.

ದೇಶದಲ್ಲಿಯ ಇಂದಿನ ಸನ್ನಿವೇಶದಲ್ಲಿ ಸತ್ಯಾಗ್ರಹದ ಅಗತ್ಯತೆ ಹೆಚ್ಚಾಗಿರುವಾಗಲೇ ಅದು ತನ್ನ ತೀವ್ರತೆಯನ್ನು ಕಳೆದುಕೊಳ್ಳುತ್ತಿದೆ. ಇಂದಿನ ವೈಜ್ಞಾನಿಕ ಮತ್ತು ತಾಂತ್ರಿಕ ಬೆಳವಣಿಗೆ ರಾಜಕಾರಣಿಗಳ ಹೃದಯವನ್ನು ಕಠಿಣಗೊಳಿಸಿದೆ. ಅವರಿಗೆ ಮಾನವೀಯತೆಯ ಧ್ವನಿ ಅರ್ಥವಾಗುವುದಿಲ್ಲ. ಮಾನವೀಯತೆಯ ಸಮಸ್ಯೆಯನ್ನು ದಂಡಶಕ್ತಿಯ ಮೂಲಕ ಪರಿಹರಿಸಬಹುದೆಂಬ ಭ್ರಮೆಯಲ್ಲಿ ಅಧಿಕಾರಸ್ಥ ರಾಜಕಾರಣಿಗಳು ಇರುತ್ತಾರೆ. ಈ ರಾಜಕೀಯ ಶಕ್ತಿ

ಮತ್ತು ದಂಡಶಕ್ತಿಗಳ ವಿರುದ್ಧವೇ ಸತ್ಯಾಗ್ರಹ ಶಕ್ತಿಯ ಆವಿರ್ಭಾವವಾಗಿದೆ. ಆ ಶಕ್ತಿಯ ಉಪಯೋಗವನ್ನು ಹೆಚ್ಚು-ಹೆಚ್ಚಾಗಿ ಮಾಡಿಕೊಳ್ಳಬೇಕಾಗಿರುವ ಸಂದರ್ಭದಲ್ಲಿ ಐರೋಮ್ ಶರ್ಮಿಳಾರವರ ದೀರ್ಘ ಉಪವಾಸದ ಹಠಾತ್ ನಿಲುಗಡೆ ಬಂದದ್ದು ಸತ್ಯಾಗ್ರಹ ಅಸ್ತ್ರದ ಸೋಲಲ್ಲ: ವ್ಯಕ್ತಿಯ ಉದ್ದೇಶದ ಸೋಲು. ಒಂದುವೇಳೆ ಶರ್ಮಿಳಾರವರ ಸತ್ಯಾಗ್ರಹ ಪ್ರತಿಭಟನೆಯ ಉದ್ದೇಶ ಇನ್ನೂ ಹೆಚ್ಚು ಜನಸಾಮಾನ್ಯರಿಗೆ ಅನ್ವಯಿಸುವಂಥದ್ದಾಗಿದ್ದರೆ ಮತ್ತು ಅವರ ವ್ಯಕ್ತಿತ್ವದ ಪರಿಚಯ ಆಗಿದ್ದರೆ ಅವರ ಹೋರಟಕ್ಕೆ ಜನರ ಬೆಂಬಲ ಖಂಡಿತ ದೊರೆಯುತ್ತಿತ್ತು. ಸತ್ಯಾಗ್ರಹದ ಸಿದ್ಧಾಂತ ನಿಂತ ನೀರಲ್ಲ ನಿರಂತರ ಬೆಳೆವಯುವಂಥಾದ್ದು. ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ಅದರ ಹೆಚ್ಚಿನ ಪ್ರಯೋಗದ ಮೂಲಕ ಪರಿಪಕ್ವಗೊಳ್ಳುತ್ತ ಹೋಗುತ್ತದೆ. "ಒಂದುವೇಳೆ ಭಾರತವೇನಾದರೂ ಹಿಂಸೆಯನ್ನು ತನ್ನ ಧರ್ಮವನ್ನಾಗಿ ಮಾಡಿಕೊಂಡರೆ ಅಂಥ ಭಾರತದಲ್ಲಿ ಇರುವುದಕ್ಕೆ ನಾನು ಬಯುಸುವುದಿಲ್ಲ" ಎಂದು ಗಾಂಧೀಜಿಯವರು ಹೇಳಿದರು. ಸತ್ಯಾಗ್ರಹ ಪ್ರತಿಭಟನೆಯಂಥ ಮಾರ್ಗಕ್ಕೆ ಎಂಥ ಸರ್ಕಾರವೂ ಸೋಲುತ್ತದೆಂಬುದಕ್ಕೆ ಇಸ್ರೇಲ್ ಮತ್ತು ಪ್ಯಾಲೆಸ್ಟೈನ್‌ಗಳ ಮಧ್ಯೆ ನಡೆದ ಇತ್ತೀಚಿನ ಉದಾಹರಣೆಯನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ೩೦೦ಕ್ಕೂ ಹೆಚ್ಚು ಸಂಖ್ಯೆಯ ಪ್ಯಾಲೆಸ್ಟೈನ್ ಕೈದಿಗಳು ತಮ್ಮ ಉಪವಾಸ ಸತ್ಯಾಗ್ರಹದ ಪ್ರತಿಭಟನೆಯ ಮೂಲಕ ಇಸ್ರೇಲಿನ ಕಾರ್ಯಗ್ರಹ ಅಧಿಕಾರಿಗಳು ಆ ಕೈದಿಗಳ ಬೇಡಿಕೆಯನ್ನು ಒಪ್ಪಿದರು. ಬಿಲ್ಲಾಲ್ ಕಯದ್ ಎಂಬ ಕೈದಿ ೫೩ ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸಿದ್ದ. ೧೪ ೧/೨ ವರ್ಷಗಳಿಂದ ವಿಚಾರಣೆ ಇಲ್ಲದೆ ಜೈಲುವಾಸ ಅನುಭವಿಸಿದ್ದ ಅವನಿಗೆ ೩೫ ವರ್ಷ. ಕೈದಿಗಳ ಉಪವಾಸ ಸತ್ಯಾಗ್ರಹಗಳಿಂದ ಈ ಕಾರಾಗೃಹದಲ್ಲಿಯ ಪರಿಸ್ಥಿತಿಯೇ ಬದಲಾಗಿದೆ ಮತ್ತು ಬಿಲ್ಲಾಲ್ ಕೈಯದ್‌ನ ವಿಚಾರಣೆ ಇಷ್ಟರಲ್ಲಿಯೆ ಪ್ರಾರಂಭವಾಗಲಿದೆ. ಬೇರೆ ದೇಶಗಳಲ್ಲಿಯೂ ಅಲ್ಲಿಯ ಜನತೆ ತಮ್ಮ ಸರ್ಕಾರದ ವಿರುದ್ಧ ಉಪವಾಸ ಸತ್ಯಾಗ್ರಹ ಪ್ರತಿಭಟನೆಯ ಮೂಲಕ ಜಯವನ್ನು ಸಾಧಿಸಿದ ಉದಾಹರಣೆಗಳಿವೆ. ಆದರೆ ನಮ್ಮ ದೇಶದಲ್ಲಿ ಚುನಾಯಿತ ಸರ್ಕಾರ ಐರೋಮ್ ಶರ್ಮಿಳಾ ಚಾನುನಂಥ ಮಹಿಳೆ ಮಾನವ ಹಕ್ಕುಗಳ ರಕ್ಷಣೆಗಾಗಿ ಹದಿನಾರು ವರ್ಷಗಳಷ್ಟು ದೀರ್ಘಕಾಲ ಉಪವಾಸ ಮಾಡಿದರೂ ಸ್ಪಂದಿಸದೆ ಇದ್ದುದು ಸರಿಯಲ್ಲ. ಇದರಿಂದ ಜನತೆ ನಿರಾಶ್ರರಾಗಬೇಕಿಲ್ಲ, ಸತ್ಯಾಗ್ರಹದ ವಿಷಯ ಸೋತಿರಬಹುದು ಆದರೆ ಸತ್ಯಗ್ರಹದ ಆತ್ಮಶಕ್ತಿ ಸೋತಿಲ್ಲ. ಸತ್ಯಾಗ್ರಹ ಮಾರ್ಗ ಇನ್ನೂ ಹೆಚ್ಚು ಹೇಗೆ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬೇಕೆಂಬುದರ ಬಗ್ಗೆ ಪ್ರಜಾಪ್ರಭುತ್ವ ವಾದಿಗಳು ಯೋಚನೆ ಮಾಡಬೇಕು ಮತ್ತು ಪ್ರಯೋಗ ಮಾಡಬೇಕು. ಸಾಧ್ಯ ಒಳ್ಳೆಯದಾಗಿದ್ದರೆ ಸಾಧನವೂ ಒಳ್ಳೆಯದಾಗಿರಕೆಂಬ ಸೂತ್ರವನ್ನು

ಗಮನದಲ್ಲಿರಿಸಿಕೊಂಡು ಸತ್ಯಾಗ್ರಹ ಕೈಗೊಂಡರೆ ಉದ್ದೇಶ ನೆರವೇರುವುದರಲ್ಲಿ ಸಂದೇಹವಿಲ್ಲ. ಸರ್ಕಾರಗಳಿಂದಾಗುವ ಅನ್ಯಾಯಗಳ ವಿರುದ್ಧ ನಾಗರೀಕರು ಪ್ರತಿಭಟಿಸಲು ಎರಡು ಅಹಿಂಸಕ ಮಾರ್ಗಗಳನ್ನು ಗಾಂಧೀಜಿ ತೋರಿಸಿಕೊಟ್ಟಿದ್ದರು. ಒಂದು ಸತ್ಯಾಗ್ರಹ, ಇನ್ನೊಂದು ಅಸಹಕಾರ ಈ ಎರಡು ಮಾರ್ಗಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿದಾಗಲೇ ಅವು ಹರಿತವಾಗುತ್ತ ಹೋಗುತ್ತವೆ. ಜನರ ಬೇಡಿಕೆಗಳಿಗೆ ಕುರುಡು ಮತ್ತು ಕಿವುಡು ಆಗಿರುವ ಸರ್ಕಾರಗಳನ್ನು ಎಬ್ಬಿಸಬೇಕಾದರೆ ಈ ಎರಡು ಮಾರ್ಗಗಳೇ ಜನರ ಮುಂದಿರುವ ಉಪಾಯಗಳು. ತಮ್ಮ ಬೇಡಿಕೆಗಳು ಈಡೇರದಿದ್ದರೆ ಮತ್ತು ತಮಗೆ ಅನ್ಯಾಯವಾಗುತ್ತಿದ್ದರೆ ಜನರು ತಮ್ಮ ಸಹನೆಯನ್ನು ಕಳೆದುಕೊಳ್ಳುತ್ತಾರೆ. ಜನತೆ ಏನೂ ತನ್ನ ಅರಿಷಡ್ವರ್ಗಗಳನ್ನು ಗೆದ್ದ ಸನ್ಯಾಸಿಯಲ್ಲ. ಪ್ರಾಣಿ ಸಹಜವಾದ ಕೋಪತಾಪಗಳೇ ಮೇಲಕ್ಕೆ ಬರುತ್ತವೆ. ಆಗ ಜನತೆಯ ಕೋಪವನ್ನು ನಿಗ್ರಹಿಸುವುದು ಎಂಥ ಸರ್ಕಾರಕ್ಕಾಗಲೀ ಕಷ್ಟವಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಕಳೆದ ಒಂದು ತಿಂಗಳಿನಿಂದ ಜಮ್ಮು – ಕಾಶ್ಮೀರ ರಾಜ್ಯದಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನೇ ಗಮನಿಸಬಹುದು. ಅಲ್ಲಿ ಪ್ರಜೆಗಳಿಂದ ಚುನಾಯಿತ ಪ್ರತಿನಿಧಿಗಳ ಸರ್ಕಾರ ನಡೆಯುತ್ತಿದೆಯಾದರೂ ಜನರ ಪ್ರತಿಭಟನೆಯನ್ನು ಹತ್ತಿಕ್ಕುವುದಕ್ಕಾಗಿ ಸೈನ್ಯಾಡಳಿತವೆ ನಡೆಯುತ್ತಿದೆ. ಆಗ್ಗಾಗ್ಗೆ ಕರ್ಫ್ಯೂ ಜಾರಿಯಲ್ಲಿರುತ್ತದೆ. ಒಂದು ರೀತಿಯಲ್ಲಿ ಜನತೆ ಮತ್ತು ಸೈನ್ಯದ ಮಧ್ಯೆ ಅಘೋಷಿತ ಸಮರವೇ ನಡೆಯುತ್ತಿದೆ. ಇದುವರೆಗೆ ಗುಂಡೇಟಿನಿಂದ ೫೨ ಜನ ಅಸೂನಿಗಿದ್ದಾರೆ. ಅಲ್ಲಿಯ ಜನರ ಜೀವನ ಮೂರಾಬಟ್ಟೆಯಾಗಿದೆ. ಆದರೂ ಜನರು ತಮ್ಮ ಹಿಂಸಾತ್ಮಕ ಪ್ರತಿಭಟನೆಯನ್ನು ನಿಲ್ಲಿಸಿಲ್ಲ. ಕಾಲಕಳೆದಂತೆ ಅದು ಹೆಚ್ಚು ತೀವ್ರವಾಗುತ್ತಾ ಹೋಗುತ್ತಿದೆ. ಇನ್ನೊಂದು ಉದಾಹರಣೆ ಕರ್ನಾಟಕದಲ್ಲಿ ನಡೆಯುತ್ತಿರುವ ಮಹದಾಯಿ ನದಿಯ ನೀರಿನ ವಿವಾದದಿಂದಾಗಿ ನಡೆಯುತ್ತಿರುವ ಚಳುವಳಿ. ಈ ಚಳುವಳಿಯುಲ್ಲಿಯೂ ಹಿಂಸೆಯ ಕೈ ಮೇಲಾಗಿದೆ. ಪೋಲಿಸರು ಗುಂಡುಹಾರಿಸುವುದು ಮತ್ತು ಜನರು ಸಾಯುವದು ಸರ್ವೆ ಸಮಾನ್ಯವಾದ ಸಂಗತಿಯಾಗಿದೆ. ಆದ್ದರಿಂದ ಈಗ ಪ್ರಜಾಪ್ರಭುತ್ವದಲ್ಲಿ ಸತ್ಯಾಗ್ರಹ ಮತ್ತು ಅಸಹಕಾರ ಎಂಬ ಎರಡು ಅಹಿಂಸಕ ಪ್ರತಿರೋಧದ ಮಾರ್ಗಗಳಿಗೆ ಸರ್ಕಾರ ಕೂಡಲೇ ಸ್ಪಂದಿಸುವಂತೆ ಆಗಬೇಕಿದೆ. ಜನತೆ ಆ ಎರಡು ಮಾರ್ಗಗಳನ್ನು ಇನ್ನೂ ಹೆಚ್ಚು ಪರಿಶುದ್ಧಗೊಳಿಸಿಕೊಳ್ಳಬೇಕಿದೆ. ಹಾಗಾದಾಗ ಮಾತ್ರ ಹಿಂಸಾಚಾರ ಕಡಿಮೆಯಾಗುವುದಲ್ಲದೆ ಜನರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಬರುವುದು. ಇಲ್ಲವಾದಲ್ಲಿ ಪ್ರಜಾಪ್ರಭುತ್ರ ದುರ್ಬಲಗೊಳ್ಳುತ್ತಾ ಹೋಗುವುದು.

ಸರ್ಕಾರಗಳು ಜನತೆಯ ಅಹಿಂಸಾತ್ಮಕ ಪ್ರತಿಭಟನೆಗಳಿಗೆ ಮನ್ನಣೆ ಕೊಡುವುದರಲ್ಲಿಯೇ ಅವುಗಳ ಮತ್ತು ಜನತೆಯ ಕ್ಷೇಮವಿದೆ. ●

ನಮ್ಮೂರಿನ "ಯೆತ್ನಳ್ಳ" ಹೊಳೆಯಾದದ್ದು

– ಪ್ರಸಾದ ರಕ್ಷಿದಿ

(ಎತ್ತಿನ ಹೊಳೆ ಕಳಸಾ ಬಂಡೂರಿ ಮತ್ತು ಮಹದಾಯಿ ನೀರಿನ ಬೇಡಿಕೆಯ ಬಗ್ಗೆ ರಾಜ್ಯದಲ್ಲಿ ಗಂಭೀರ ಸ್ವರೂಪದ ಚಳುವಳಿ ನಡೆದಿದೆ. ಚಳುವಳಿಯಲ್ಲಿ ಭಾಗವಹಿಸಿದವರಿಗೆ ಮಹಿಳೆಯರು ಮತ್ತು ವೃದ್ಧರನ್ನು ಸೇರಿ ಪೋಲಿಸರ ಲಾಟಿ ಏಟಿಗೆ ಬಲಿಯಾಗಿದ್ದಾರೆ. ಎತ್ತಿನಹೊಳೆ ಎಂದು ಪ್ರಸಿದ್ಧವಾಗಿರುವುದು ಹಿಂದಕ್ಕೆ ಅದರ ಹೆಸರು "ಎತ್ತಿನ ಹಳ್ಳ" ಆ ಹಳ್ಳದ ಸುತ್ತಲು ನಡೆದ ಘಟನೆಗಳ ಬಗ್ಗೆ ಲೇಖಕರು ತುಂಬ ಮನೋಜ್ಞವಾಗಿ ಬರೆದಿದ್ದಾರೆ. ಎತ್ತಿನ ಹೊಳೆಯ ಸಾಂಸ್ಕೃತಿಕ ರೂಪವನ್ನು ತಿಳಿಯಲು ಈ ಲೇಖನ ಸಹಕಾರಿ – ಸಂ)

ನಮ್ಮೂರಿನ ರಂಗ ಚಟುವಟಿಕೆಗಳು ಮತ್ತು ಆಮೂಲಕ ನಾವು ಕಟ್ಟಿಕೊಂಡ ಬದುಕು, ಹೋರಾಟಗಳು ದುಃಖಃ–ಸಂಭ್ರಮಗಳು, ಅದರ ಮೂಲಕ ಹೊರಜಗತ್ತಿನೊಡನೆ ನಾವು ನಡೆಸುತ್ತಿರುವ ಸಂವಾದ, ಈ ಎಲ್ಲದರ ಜೊತೆ ಎತ್ತಿನ ಹಳ್ಳದ ಸಂಬಂಧವಿದೆ. ಸಂಬಂಧ ಅನ್ನುವುದು ಯಾವಾಗಲೂ ದೊಡ್ಡದೇ.

ಸಕಲೇಶಪುರ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿರುವ ಮೂರ್ಕಣ್ಣು ಗುಡ್ಡ ಬೆಟ್ಟಸಾಲಿನಲ್ಲಿ ಎತ್ತಿನ ಹಳ್ಳ ಹುಟ್ಟುತ್ತದೆ. ಅಲ್ಲಿ ಮೂರು ತೊರೆಗಳು ಹುಟ್ಟುತ್ತವೆ. ಎತ್ತಿನಹಳ್ಳ, ಚಿಟ್ಟನಹಳ್ಳ ಮತ್ತು ಜಪಾವತಿ. ಉಳಿದೆರಡು ತೊರೆಗಳು ಪೂರ್ವಕ್ಕೆ ಹರಿದು ಹೇಮಾವತಿಯ ಮಡಿಲಿಗೆ ಬಿದ್ದರೆ, ಎತ್ತಿನಹಳ್ಳ ಪಶ್ಚಿಮಾಭಿಮುಖಿ. ಇದರ ಹರಿವು, ಎಂಟ್ಹತ್ತು ಕಿಲೋಮೀಟರುಗಳು ಅಷ್ಟೆ. ನಂತರ ಶಿರಾಡಿ ಘಟ್ಟ ಪ್ರದೇಶದ ಕೆಂಪೊಳೆಯಲ್ಲಿ ಲೀನವಾಗುತ್ತದೆ.

ನಾವೆಲ್ಲ ಚಿಕ್ಕವರಿದ್ದಾಗ ಬೇಸಿಗೆಯ ರಜಾದಿನಗಳಲ್ಲಿ ಕಾಲ ಕಳೆಯುತ್ತಿದ್ದುದು, ಈಜು ಕಲಿತದ್ದು ಎತ್ತಿನ ಹಳ್ಳದಲ್ಲೇ ಆ ಕಾಲದಲ್ಲಿ ಮಧ್ಯಾಹ್ನದ ವೇಳೆಗೆ ನೂರಾರು ದನಕರುಗಳನ್ನು ನೀರಿಗಾಗಿ ಎತ್ತಿನಹಳ್ಳಕ್ಕೆ ತರುತ್ತಿದ್ದರು. ಆಗ ಸುತ್ತಲಿನ ಗ್ರಾಮಗಳಲ್ಲಿ ಸಾವಿರಾರು ಎಕರೆ ಗೋಮಾಳವೂ ಇತ್ತು. ದನಕಾಯುವ ಹುಡುಗರ ದಂಡೇ ಅಲ್ಲಿ ನೆರೆಯುತ್ತಿತ್ತು. ಬುಗುರಿ, ಚಿಣ್ಣಿಂದಾಡು ಆಡುತ್ತಾ, ಬೀಡಿ ಸೇದುತ್ತ, ನಿತ್ಯ ಜಲಕ್ರೀಡೆಯ ವೈಭೋಗದಲ್ಲಿದ್ದ ಆ ಹುಡುಗರನ್ನು ಕಂಡಾಗ. ಶಾಲೆಗೆ ಹೋಗಲೇಬೇಕಾದ ಶಿಕ್ಷೆಗೊಳಗಾಗಿದ್ದ ನಮ್ಮಂತವರಿಗೆ, ದನಕಾಯುವವರು ಪರಮ ಸುಖಿಗಳೆಂದು ಅನ್ನಿಸಿ ಬುಗುರಿ, ಚಿಣ್ಣಿದಾಂಡಿಗಾಗಿ ಅವರ ಸ್ನೇಹಕ್ಕೆ ಹಾತೊರೆಯುತ್ತಿದ್ದೆವು. ಹರಕು ಬಟ್ಟೆ ತೊಟ್ಟು ಒಪ್ಪೊತ್ತಿನ ಊಟದ ಶ್ರೀಮಂತಿಕೆಯಲ್ಲಿದ್ದ ಆ ದನಗಾಹಿಗಳಿಗೆ, ಸಾಲೆ ಕಲಿಯುತ್ತಿದ್ದ ನಮ್ಮಂತವರ ಬಗ್ಗೆ ವಿಶೇಷ ಗೌರವವೇನೂ ಇರಲಿಲ್ಲ. ಅವರೆಲ್ಲ ನಮ್ಮನ್ನು ಕೈಲಾಗದ 'ಹೇತ್ಲಾಂಡಿ'ಗಳಂತೆ ಕಾಣುತ್ತಿದ್ದರಲ್ಲದೆ, ತಾವುಗಳು ಮಹಾನ್ ವೀರಾಧಿವೀರರಂತೆ ನಡೆದುಕೊಳ್ಳುತ್ತಿದ್ದರು. ಅವರಲ್ಲಿ ಅವರದ್ದೇ ಆದ ಅನೇಕ ತರದ ಸಾಹಸದ ರೋಚಕ ಕತೆಗಳಿರುತ್ತಿದ್ದವು. ಅವುಗಳಲ್ಲಿ ಮಾಮುಬ್ಯಾರಿಯ ಅಂಗಡಿಯಿಂದ ಕದ್ದ ಬೀಡಿ ಬಂಡಲಿನ ಕತೆ, ಇನ್ಯಾರದೋ

ತೋಟದಲ್ಲಿ ಬೈನೆ ಬಿಚ್ಚಿ ಸೇಂದಿ ಕುಡಿದು ಏಟುತಿಂದದ್ದು ಮುಂತಾದ ಸಾಹಸಗಳಿರುತ್ತಿದ್ದವು.

ಎತ್ತಿನಹಳ್ಳದ ಎರಡೂ ದಡಗಳ ಉದ್ದಕ್ಕೂ ಸೊಂಪಾಗಿ ಬೆಳೆದ ವಾಟೆ ಮೆಳೆಗಳಿದ್ದವು. ಸುತ್ತಲಿನ ಗ್ರಾಮಗಳ ಸಮಸ್ತ ಕೃಷಿ ಚಟುವಟಿಕೆಗಳಿಗೆ ಪೂರಕ ಸಾಮಗ್ರಿಗಳಾದ ಅಂದರೆ ಕುಕ್ಕೆ, ಮಂಕರಿ, ಪಾತಿ-ಚಪ್ಪರಗಳಿಗೆ , ಮಳೆಗಾಲಕ್ಕೆ ಗೊರಗ, ಗುಡಿಸಲುಗಳ ಮಾಡಿಗೆ ಹುಲ್ಲು ಹೊದೆಸಲು ಅಡ್ಡಗಳು, ಗೋಡೆಗೆ ನೆರಿಕೆ, ತಟ್ಟಿ, ಎಲ್ಲಕ್ಕೂ ಎತ್ತಿನ ಹಳ್ಳದ ವಾಟೆಯೇ ಆಧಾರ. ಎಲ್ಲ ದನಗಾಹಿಗಳ ಕೈಯಲ್ಲೂ ದನಗಳನ್ನು ಅಟ್ಟುವ ಕೋಲಿನೊಂದಿಗೆ ವಾಟೆಯಿಂದ ತಯಾರಿಸಿದ ಕೊಳಲೂ ಇರುತ್ತಿತ್ತು. ದನಗಾಹಿಗಳು ದಾರಿಯುದ್ದಕ್ಕೂ ಯಾವುದಾದರೂ ಸಿನಿಮಾ ಹಾಡಿನ ಅಥವಾ ಜಾನಪದ ಗೀತೆಗಳ ದಾಟಿಯನ್ನು ನುಡಿಸುತ್ತ ಸಾಗುತ್ತಿದ್ದರು, ಇದು ಬಹಳ ದೂರದವರೆಗೆ ಕೇಳುತ್ತಿತ್ತು. ಅವರಲ್ಲೂ ಅನೇಕರು ಸುಶ್ರಾವ್ಯವಾಗಿ ನುಡಿಸುತ್ತಿದ್ದು ಮಾರ್ಗದರ್ಶನ ದೊರೆತಿದ್ದರೆ ಉತ್ತಮ ಕೊಳಲು ವಾದಕರಾಗುವ ಸಾಧ್ಯತೆ ಇತ್ತು. ಎತ್ತಿನ ಹಳ್ಳದ ಬಳಿ ಮೇಳೈಸಿರುತ್ತಿದ್ದ ನೂರಾರು ದನಕರುಗಳ ಹಿಂಡು ವಾಪಸ್ ಹೋಗುವಾಗ ತಮ್ಮ ಒಡೆಯನ ಕೊಳಲಿನ ದನಿಯನ್ನನುಸರಿಸಿ ತಮ್ಮತಮ್ಮ ಗುಂಪನ್ನು ಸೇರಿಕೊಳ್ಳುತ್ತಿದ್ದವು.

ಹಿಂದಿನ ಕಾಲದಲ್ಲಿ ಮಂಗಳೂರಿನತ್ತ ಸಾಗುತ್ತಿದ್ದ ಎತ್ತಿನ ಗಾಡಿಗಳು, ಇದೇ ಎತ್ತಿನ ಹಳ್ಳದ ಬಳಿ ತಂಗುತ್ತಿದ್ದವಂತೆ. ಎತ್ತುಗಳನ್ನು ತೊಳೆದು, ನೀರು ಕುಡಿಸಿ ದಣಿವಾರಿಕೊಳ್ಳುತ್ತಿದ್ದ ಈ ಸ್ಥಳವನ್ನು ಎತ್ತಿನ ಹಳ್ಳವೆಂದು ಕರೆದಿರಬೇಕು. ಮುಂದೆ ಇದೇ ಹೆಸರು ರೂಡಿಗೆ ಬಂತು. ಜನರ ಬಾಯಲ್ಲಿ "ಯೆತ್ನಳ್ಳ"ವಾಯಿತು. (ಸಕಲೇಶಪುರ ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಈ ಸ್ಥಳಕ್ಕೆ "ಎತ್ತಿನಹಳ್ಳ" ಎಂದೇ ಹೆಸರು. ಇದರ ಮೇಲ್ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲೇ ನದಿತಿರುವು ಯೋಜನೆಯ ಅಣೆಕಟ್ಟೊಂದು ನಿರ್ಮಾಣವಾಗುತ್ತಿದೆ).

ಹೀಗೆ ಹಾಡುತ್ತ, ಕುಣಿಯುತ್ತ, ಮಳೆಗಾಲದಲ್ಲಿ ಆರ್ಭಟಿಸುತ್ತ, ಭೋರ್ಗರೆಯುತ್ತ, ತಣ್ಣಗೆ ಹರಿಯುತ್ತಿದ್ದ, ಎತ್ತಿನ ಹಳ್ಳಕ್ಕೆ ಶುಕ್ರ, ಶನಿಯೋ ಅಂತೂ ಒಂದು ದೆಸೆ ಪ್ರಾರಂಭವಾದದ್ದು, ಮೂರೂವರೆ ದಶಕಗಳ ಹಿಂದೆ. ಸಕಲೇಶಪುರ ನಗರಕ್ಕೆ ಪೂರೈಕೆಯಾಗುತ್ತಿರುವ ಹೇಮಾವತಿ ನದಿಯ ನೀರು ಕಲುಷಿತವಾಗಿದೆ, ಕುಡಿಯಲು ಯೋಗ್ಯವಾಗಿಲ್ಲ ಎಂದು ಕೆಲವರು ಅದಕ್ಕೆ ಪರಿಹಾರವನ್ನು ಹುಡುಕತೊಡಗಿದರು. ಅಂದಿನ ರಾಜಕಾರಣಿಗಳು, ಸಕಲೇಶಪುರ ಪುರಸಭೆಯ ಹಿರಿಯರೂ ಸೇರಿ ಎತ್ತಿನ ಹಳ್ಳದ ನೀರನ್ನು ಸಕಲೇಶಪುರ ನಗರಕ್ಕೆ ತಂದರೆ ಶುದ್ಧವಾದ ನೀರು ಸಿಗುತ್ತದೆಂದು ಭಾವಿಸಿದರು. ಇದಕ್ಕೆ ಅಂದಿನ ಹಿರಿಯ ರಾಜಕಾರಣಿಗಳಲ್ಲೊಬ್ಬರಾದ ಎನ್.ಕೆ.ಗಣಪಯ್ಯನವರೂ ದನಿಗೂಡಿದರು. ಗಣಪಯ್ಯನವರ "ಹಾರ್ಲೆ ಎಸ್ಟೇಟ್" ಕೂಡಾ ಎತ್ತಿನ ಹಳ್ಳದ ಪಕ್ಕದಲ್ಲೇ ಇತ್ತು. ಹಾರ್ಲೆ ಎಸ್ಟೇಟಿನ ಪಕ್ಕದಲ್ಲಿ ಸಣ್ಣ ಕಟ್ಟೆಯೊಂದನ್ನು ಕಟ್ಟಿ ನೀರನ್ನು ಆರು ಕಿ.ಮೀ ದೂರದ ಸಕಲೇಪುರಕ್ಕೆ ತರುವ ಸಣ್ಣಯೋಜನೆ ಇದಾಗಿತ್ತು. ಆದರೆ ಬಹಳ ಬೇಗ ಈ ಯೋಜನೆಯ ಮೇಲೆ ಅಧಿಕಾರಿಗಳ, ರಾಜಕಾರಣಿಗಳ ಗಮನ ಹರಿಯಿತು. ಎತ್ತಿನಹಳ್ಳದ ನೀರನ್ನು ಬರಿಯ ಸಕಲೇಶಪುರ ನಗರಕ್ಕೆ ತರುವುದರೊಂದಿಗೆ, ಸ್ವಲ್ಪ ದೊಡ್ಡ ಯೋಜನೆಯನ್ನಾಗಿ ಮಾಡಿ ಹೇಮಾವತಿ ನದಿಗೆ

ಸೇರಿಸಿದರೆ ನೀರಾವರಿಗೂ ಮತ್ತಷ್ಟು ನೀರು ದೊರೆಯುವುದೆಂಬ ಮಾತು ಕೇಳಿಬರತೊಡಗಿತು. ಇದನ್ನು ಸಾರ್ವಜನಿಕವಾಗಿ ಪ್ರಸ್ತಾಪಿಸಿದವರು ಅಂದಿನ ನೀರಾವರಿ ಮಂತ್ರಿಗಳಾಗಿದ್ದ ಹೆಚ್.ಸಿ. ಶ್ರೀಕಂಠಯ್ಯ. ಆಗಲೇ ಮುಂದಾಗಲಿರುವ ಅನಾಹುತವನ್ನು ಗ್ರಹಿಸಿ ಎನ್.ಕೆ.ಗಣಪಯ್ಯ ಈ ಯೋಜನೆಯನ್ನು ವಿರೋಧಿಸತೊಡಗಿದರು. ಆಗ ಕೆಲವರು "ಈಗ ಗಣಪಯ್ಯ ತನ್ನ ಕಾಫಿತೋಟ ಮುಳುಗಡೆ ಆಗುತ್ತೆ ಅಂತ ವಿರೋಧ ಮಾಡ್ತಾರೆ, ಮೊದ್ಲು ಶುರು ಮಾಡಿದ್ದೂ ಇವರೇ" ಎಂದು ದೂರತೊಡಗಿದರು. ವಾಸ್ತವದ ಸಂಗತಿಯೆಂದರೆ, ಈ ಯೋಜನೆಯಿಂದ ಗಣಪಯ್ಯನವರ ತೋಟ ಮುಳಗಡೆಯಾಗುತ್ತಿರಲಿಲ್ಲ, ಬದಲಿಗೆ ಅಕ್ಕ ಪಕ್ಕದ ಕೆಲವು ಕಾಫಿ ತೋಟಗಳು ಭಾಗಶಃ ಮುಳುಗಡೆಯಾಗುತ್ತಿದ್ದವು.

ಆ ನಂತರದ ದಿನಗಳಲ್ಲಿ ಇದಕ್ಕಾಗಿ ಸರ್ವೆ ಇತ್ಯಾದಿ ಕಾರ್ಯಗಳು ಪ್ರಾರಂಭವಾದವು. ಪ್ರತಿನಿತ್ಯ ನೀರಿನ ಹರಿವನ್ನು ಅಳೆಯಲು ಒಬ್ಬ ನೌಕರನ ನೇಮಕವೂ ಆಯ್ತು. ಹಾರ್ಲೆ ಎಸ್ಟೇಟಿನ ಬಳಿ ಎತ್ತಿನ ಹಳ್ಳಕ್ಕೆ, ಅಬ್ಬಿ ಹಳ್ಳ ಎನ್ನುವ ಪುಟ್ಟ ತೊರೆಯೊಂದು ಸೇರುವ ಜಾಗವಿದೆ. ಅಲ್ಲಿ ಕಟ್ಟೆಯೊಂದನ್ನು ಕಟ್ಟಿ ನಾಲೆಯಮೂಲಕ, ಹೆಬ್ಬಸಾಲೆ, ಮಾವಿನಕೂಲು, ಗ್ರಾಮಗಳನ್ನು ಹಾದು, ಸಕಲೇಶಪುರ ಮೂಡಿಗೆರೆ ರಸ್ತೆಯನ್ನು ಹಾರ್ಲೆಕೂಡಿಗೆ ಎನ್ನುವ ಸ್ಥಳದಲ್ಲಿ ದಾಟಿ, ಗಾಣದಹೊಳೆ ಗ್ರಾಮವನ್ನು ಸೇರಿ ಅಲ್ಲಿಂದ ಹೇಮಾವತಿ ನದಿಗೆ ನೀರನ್ನು ಸಾಗಿಸುವ ಯೋಜನೆಯೂ ಸುದ್ದಿಯಾಯಿತು. ಯಾರ ಜಮೀನು ಹೋಗಬಹುದು, ಪರಿಹಾರವೆಷ್ಟು ಸಿಕ್ಕೀತು ಎನ್ನುವ ಲೆಕ್ಕಾಚಾರಗಳು ಪ್ರಾರಂಭವಾದವು. ಇದೆಲ್ಲ ಆಗಲು ಇನ್ನೂ ಇಪ್ಪತ್ತು ವರ್ಷವಾದರೂ ಬೇಕು. ಆವಾಗ ನೋಡೋಣ ಎನ್ನುವವರೂ ಇದ್ದರು.

ಆಗಿನ ಅಂದಾಜಿನ ಪ್ರಕಾರ, ಹಾರ್ಲೆ ಎಸ್ಟೇಟಿನ ಬಳಿ ಕಟ್ಟೆಯನ್ನು ಕಟ್ಟಿ ನೀರನ್ನು ತಿರುಗಿಸಿದರೆ,ಎತ್ತಿನ ಹಳ್ಳದಿಂದ ದೊರೆಯುವ ನೀರಿನ ಪ್ರಮಾಣ ಸುಮಾರು ಒಂದೂವರೆ ಟಿ.ಎಮ್.ಸಿ ಎಂದು ನೀರಾವರಿ ಇಲಾಖೆ ಪ್ರಕಟಿಸಿತ್ತು.

ನಂತರದ ವರ್ಷಗಳಲ್ಲಿ ಈ ನೀರು ತಿರುಗಿಸುವ ಯೋಜನೆ ಗುಪ್ತಗಾಮಿನಿಯಾಗಿ ಹರಿಯುತ್ತಲೇಇತ್ತು.

ಎತ್ತಿನ ಹಳ್ಳಕ್ಕೆ ಈ ಕಟ್ಟೆಯನ್ನು ಕಟ್ಟಲು ಯೋಜಿಸಿದ್ದ ಜಾಗ ಪೂರ್ಣ ಚಂದ್ರ ತೇಜಸ್ವಿಯವರ ಮೆಚ್ಚಿನ ತಾಣಗಳಲ್ಲಿ ಒಂದು. ಅವರು ಎಪ್ಪತ್ತರ ದಶಕದಲ್ಲಿ ಹಲವು ಬಾರಿ ಇಲ್ಲಿಗೆ ಮೀನು ಹಿಡಿಯಲು ಬರುತ್ತಿದ್ದರು. ಆಗ ನಮ್ಮ ಸುತ್ತಮುತ್ತಲಿನ ಗ್ರಾಮಗಳ ಕೆಲವರು ಯುವಕರೂ ಅವರೊಂದಿಗೆ ಹೋಗುವುದಿತ್ತು. ಆಗಿನ್ನೂ ಈ ಎತ್ತಿನ ಹಳ್ಳದ ನೀರನ್ನು ಸಕಲೇಶಪುರಕ್ಕೆ ಸಾಗಿಸುವ ಮಾತಷ್ಟೆ ಪ್ರಚಾರದಲ್ಲಿತ್ತು. ನನ್ನ ಗೆಳೆಯರು ಯಾರೋ ತೇಜಸ್ವಿಯವರಿಗೆ. ಈ ವಿಚಾರವನ್ನು ತಿಳಿಸಿದ್ದರು. ಅದಕ್ಕೆ ತೇಜಸ್ವಿ "ಹೇಮಾವತಿ ನೀರು ಕ್ಲೀನಿಲ್ಲ ಅಂದ್ರೆ ಅದನ್ನ ಕೆಡಸಿದವ್ರು ಯಾರು, ನಾವೇ ಅಲ್ವೆ, ಈಗೆಲ್ಲ ಏನೇನೋ ವಿಧಾನಗಳು ಬಂದಿವೆ, ಅದೇ ನೀರನ್ನು ಕ್ಲೀನ್ ಮಾಡಿ ಬಳಸಬೇಕು, ಮನೆಬಾಗಲ ನೀರು ಕೆಡಸಿ ಇನ್ನೊಂದು ಕಡೆಯಿಂದ ನೀರು ತರ್ತೀನಿ ಅನ್ನೋದು ಮೂರ್ಖತನ ಕಣ್ರೀ ನೀವೆಲ್ಲಾ ವಿರೋಧಿಸಬೇಕು" ಎಂದಿದ್ದರಂತೆ. ನಂತರದ

ದಿನಗಳಲ್ಲಿ ತೇಜಸ್ವಿಯವರೂ ಇತ್ತ ಬರುವುದನ್ನು ಕಡಿಮೆ ಮಾಡಿದರು. (ಇತ್ತೀಚೆಗೆ ಖಾಸಗಿ ಟಿ.ವಿ ಛಾನಲ್ ಒಂದಕ್ಕೆ ತೇಜಸ್ವಿಯವರ ಬಗ್ಗೆ ನಾವೊಂದಷ್ಟು ಜನ ಗೆಳೆಯರು ಸೇರಿ, ಸಾಕ್ಷ್ಯ ಚಿತ್ರವೊಂದನ್ನು ಮಾಡಿದೆವು, ಆಗ ಇದೇ ಸ್ಥಳದಲ್ಲಿ ಚಿತ್ರೀಕರಣ ನಡೆಸಲಾಗಿದೆ. ಎತ್ತಿನ ಹೊಳೆಯೋಜನೆ ಪೂರ್ಣಗೊಂಡರೆ ಈ ಸ್ಥಳಗಳೆಲ್ಲ ನೆನಪು ಮಾತ್ರವಾಗಲಿದೆ)

ಎತ್ತಿನಹಳ್ಳ ಹುಟ್ಟಿ ಹರಿಯುವ ಮೂರ್ಕಣ್ಣುಗುಡ್ಡ ಸಾಲಿನ ತಪ್ಪಲಿನಲ್ಲೇ ನಮ್ಮ ರಂಗ ತಂಡವೂ ಹುಟ್ಟಿ ಬೆಳೆದಿದೆ. ಎಪ್ಪತ್ತರ ದಶಕದ ಕೊನೆಯಭಾಗದಲ್ಲಿ ಹುಟ್ಟಿದ ನಮ್ಮ ರಂಗಬಳಗದ ಗೆಳೆಯರೆಲ್ಲ ಸೇರಿ, ಹತ್ತು ವರ್ಷಗಳ ಚಟುವಟಿಕೆಯ ನಂತರ ಪ್ರಥಮ ಬಾರಿಗೆ ರಂಗ ತರಬೇತಿ ಶಿಬಿರವೊಂದನ್ನು ಆಯೋಜಿಸಿದ್ದೆವು. ಅದರ ಉದ್ಘಾಟನೆಯನ್ನು ತೇಜಸ್ವಿಯವರೇ ನಡೆಸಿಕೊಟ್ಟರು. ಆ ದಿನ ನಮ್ಮೂರ ಶಾಲಾಮಕ್ಕಳಿಂದ ನಾಟಕ ಪ್ರದರ್ಶನವಿತ್ತು. ನಾಟಕವನ್ನು ನಾನೇ ಬರೆದು ನಿರ್ದೇಶಿಸಿದ್ದೆ. ನಾಟಕದ ಹೆಸರು "ಮೂರ್ಕಣ್ಣು ಗುಡ್ಡ". ನಾಟಕದ ವಸ್ತುವೂ ಪರಿಸರ ನಾಶದಿಂದಾಗುವ ಹಾನಿಯ ಬಗ್ಗೆ ಇತ್ತು. ಮಕ್ಕಳ ಅಭಿನಯವನ್ನು ತೇಜಸ್ವಿಯವರು ತುಂಬಾ ಮೆಚ್ಚಿಕೊಂಡರು. ಮುಂದೆ ನಮ್ಮ ರಂಗ ತಂಡಕ್ಕೆ "ಪ್ರಕೃತಿ ರಂಗ ಮಂಚ" ಎಂದೇ ಹೆಸರಿಟ್ಟೆವು.

ಈಗ ನಮ್ಮೆಲ್ಲ ರಂಗ ಚಟುವಟಿಕೆಗಳು ನಡೆಯುತ್ತಿರುವ, ಇನ್ನೂ ನಿರ್ಮಾಣ ಹಂತದಲ್ಲಿರುವ ರಂಗ ಮಂದಿರಕ್ಕೆ 'ಪೂರ್ಣಚಂದ್ರ ತೇಜಸ್ವಿ ರಂಗಮಂದಿರ' ವೆಂದು ಕರೆದಿದ್ದೇವೆ. ಇಲ್ಲಿ ನಿಂತು ನೋಡಿದರೆ, ಪೂರ್ವ ದಿಕ್ಕಿಗೆ ಸಕಲೇಶಪುರದ ಮಂಜ್ರಾಬಾದ್ ಕೋಟೆಯೂ, ದಕ್ಷಿಣದಲ್ಲಿ ಬಾನಿನಂಚಿಗೆ ಕುಮಾರ ಪರ್ವತವೂ ಪಶ್ಚಿಮದಲ್ಲಿ ಮೂರ್ಕಣ್ಣು ಗುಡ್ಡ ಸಾಲೂ, ವಾಯುವ್ಯದಲ್ಲಿ ದೂರದಲ್ಲಿ ಬಾಬಾಬುಡನ್ ಗಿರಿಶಿಖರಗಳೂ ಗೋಚರಿಸುತ್ತವೆ. ರಂಗಮಂದಿರದಲ್ಲಿ ನಿಂತು, ಅಲ್ಲಿಂದಲೇ ಸಂಪೂರ್ಣ ಎತ್ತಿನ ಹಳ್ಳದ ಜಲಾನಯನ ಪ್ರದೇಶವನ್ನು ವೀಕ್ಷಿಸಬಹುದು.

ಘಟ್ಟ ಪ್ರದೇಶದ ಕೆಂಪೊಳೆಯಲ್ಲಿ ಹಾಗೂ ಕಾಡುಮನೆ ಭಾಗದಲ್ಲಿ ಜಲವಿದ್ಯುತ್ ಯೋಜನೆಗಳು ಪ್ರಾರಂಭವಾದ್ದರಿಂದ, ಎತ್ತಿನ ಹಳ್ಳವನ್ನು ತಿರುಗಿಸುವ ಯೋಜನೆಯ ಮಾತು ಹಿನ್ನೆಲೆಗೆ ಸರಿಯಿತು. ಈ ನೀರನ್ನು ತಿರುಗಿಸಿದರೆ ಕೆಳಭಾಗದಲ್ಲಿ ಸ್ಥಾಪಿಸಿರುವ ಜಲವಿದ್ಯುತ್ ಯೋಜನೆಗಳಿಗೆ ನೀರಿನ ಕೊರತೆ ಉಂಟಾಗುವುದರಿಂದ ಇದನ್ನು ಕೈಬಿಡಲಾಗುವುದೆಂದೇ ಎಲ್ಲರೂ ನಂಬಿದರು. ಈ ವಿದ್ಯುತ್ ಯೋಜನೆಗಳಲ್ಲಿ ಕೆಲವು ಆನೆದಾರಿಯಲ್ಲೇ ಅಡ್ಡವಾಗಿ ಸ್ಥಾಪಿತವಾದವು. ಇದರಿಂದಾಗಿ ಸುತ್ತಲಿನ ಗ್ರಾಮಗಳಲ್ಲಿ ಆನೆ ಮತ್ತಿತರ ಕಾಡುಪ್ರಾಣಿಗಳಿಂದ ತೊಂದರೆಯೂ ಆರಂಭವಾದವು. ಆದರೆ ಈ ಜಲ ವಿದ್ಯುತ್ ಯೋಜನೆಗಳಿಂದ ನಮ್ಮೂರು ಬೆಳಕಾದೀತೆಂತು ಕಾದು ಕುಳಿತವರಿಗೆ ನಿರಾಸೆಯಾದದ್ದು ಈ ವಿದ್ಯುತ್ ಆಂದ್ರದ ಪಾಲಾಗಿದೆಯೆಂದು ತಿಳಿದಾಗ.

ಇದೊಂದಿಗೆ ಮಲೆನಾಡಿನ ಅತ್ಯಂತ ಸೂಕ್ಷ್ಮ ಹಾಗೂ ಸುಂದರ ಅರಣ್ಯಪ್ರದೇಶಗಳಾದ ಬಿಸಲೆ, ಕಾಗಿನಹರೆ, ಹೊಂಗಡಹಳ್ಳ ಪ್ರದೇಶಗಳನ್ನೆಲ್ಲ ಮುಳುಗಿಸಿ ವಿದ್ಯುತ್ ತಯಾರಿಸುವ 'ಗುಂಡ್ಯಜಲ ವಿದ್ಯುತ್‌ಯೋಜನೆ'ಯೂ ಪ್ರಕಟವಾಯ್ತು. ನಂತರ ನಡೆದ ಹೋರಾಟದ ವಿವರಗಳು ಎಲ್ಲರಿಗೂ ತಿಳಿದಿರುವಂತದ್ದೇ ಆಗಿದೆ.

ಗುಂಡ್ಯ ಜಲ ವಿದ್ಯುತ್ ಯೋಜನೆಗೆ ವ್ಯಾಪಕವಾದ ವಿರೋಧ ವ್ಯಕ್ತವಾಯಿತು.

ಸುಂದರಲಾಲ ಬಹುಗುಣ ಅವರೂ ಬಂದು ಈ ಹೋರಾಟದಲ್ಲಿ ಭಾಗಿಯಾದರು. ನಮ್ಮೂರಿನಲ್ಲೂ ಒಂದು ರಾತ್ರಿ ಉಳಿದರು. ನಮ್ಮ ರಂಗಮಂದಿರದಲ್ಲಿ ಕುಳಿತು ಜನರನ್ನು ಭೇಟಿಯಾದರು ಮಾತನಾಡಿದರು. ಅವರೂ ಕೂಡಾ ರಂಗಕರ್ಮಿಗಳೆಂದು ನಮಗೆ ತಿಳಿದ್ದು ಆಗಲೇ. ಪೂರ್ಣಚಂದ್ರ ತೇಜಸ್ವಿ ರಂಗಮಂದಿರದ ಅಹ್ಲಾದಕರ ಪರಿಸರದಿಂದ ಖುಷಿಗೊಂಡಂತಿದ್ದ ಬಹುಗುಣ ಲಹರಿಬಂದಂತೆ ಮಾತನಾಡುತ್ತ ಹೋದರು. ಚಿಪ್ಕೋ ಚಳಿವಳಿಯಿಂದ ಆರಂಭಿಸಿದ ಅಜ್ಜನ ಮಾತು ಹೆಚ್ಚಾಗಿ ರಂಗಭೂಮಿಯ ಸುತ್ತಲೇ ತಿರುಗಿತು. ಬೀದಿ ನಾಟಕ, ಹಾಡುಗಳ ಮೂಲಕ ಜನ ಸಂಘಟನೆ ಮಾಡಿದ ದಿನಗಳನ್ನು ನೆನಪಿಸಿಕೊಂಡು ಉತ್ಸಾಹದಿಂದ ಮಾತನಾಡಿದರು. 'ಭಾಷಣಕ್ಕೆ ಬಾಯಿ ಮಾತ್ರ ಇದೆ, ಆದರೆ ರಂಗಭೂಮಿಗೆ ಬಾಯಿ, ಕಣ್ಣು, ಕಿವಿ ಎಲ್ಲವೂ ಇವೆ ಹಾಗಾಗಿ ಯಾವುದೇ ಚಳುವಳಿಗೂ ರಂಗಭೂಮಿ ಅತ್ಯಂತ ಶಕ್ತ ಮಾಧ್ಯಮ ನಾಟಕಗಳನ್ನು ನೋಡಲು ಮಕ್ಕಳು ದೊಡ್ಡವರು ಮಹಿಳೆಯರು,ಎಲ್ಲರೂ ಬರುತ್ತಾರೆ ಅದರಲ್ಲೂ ಮಹಿಳೆಯರು ಸ್ವಾಭಾವಿಕವಾಗಿ ಹೆಚ್ಚು ಕರುಣಾಮಯಿಗಳು, ನಾಟಕ ನೇರವಾಗಿ ಹೃದಯಕ್ಕೆ ತಟ್ಟುವುದರಿಂದ ಅದರ ಪರಿಣಾಮ ಮಹಿಳೆಯರಲ್ಲಿ ಹೆಚ್ಚಿನದಾಗಿರುತ್ತದೆ. ಅದರಿಂದ ಚಳುವಳಿಗೂ ಹೆಚ್ಚಿನ ಬಲ ಬರುತ್ತದೆ' ಎಂದ ಅವರು, ನೀವು ಈ ಪರಿಸರ ಕಾಳಜಿಯ ಯಾತ್ರೆಯನ್ನು ರಂಗಕ್ರಿಯೆಗಳ ಮೂಲಕವೂ ಮುಂದುವರಿಸಿ, ಈ ಕೆಲಸವನ್ನು ಯಾವ ಭಾಷಣಕಾರರಾಗಲೀ ಸರ್ಕಾರವಾಗಲೀ ಮಾಡಲಾಗದು, ಎಂದರು. ಪರಿಸರ ಯಾತ್ರೆಯ ಕಾರ್ಯಕ್ರಮದಬಗ್ಗೆ ಮಾತನಾಡುತ್ತ ನಾವು ಮಾಡುವ ಈ ಕೆಲಸ ಮನುಷ್ಯರಿಗೆ ಮಾತ್ರವಲ್ಲ ಇಡೀ ಭೂಮಂಡಲದ ಉಳಿವಿಗೆ ಆ ಮೂಲಕ ಸಕಲ ಜೀವರಾಶಿಯ ಉಳಿವಿಗೆ ಅಗತ್ಯ ಆದರೆ ನಮಗೆ ಹಿರಿಯರಿಗೆ ಇನ್ನು ಹೆಚ್ಚು ಕಾಲಾವಕಾಶ ಉಳಿದಿಲ್ಲ. ನಮ್ಮ ಮುಂದಿರುವ ಈ ಎಳೆಯರಿಗೆ ಸಾಕಷ್ಟು ಅವಕಾಶವಿದೆ ಆದ್ದರಿಂದ ಮಕ್ಕಳೇ ನಮ್ಮ ಮುಂದಿನ ಭರವಸೆ, ಎಂದ ಅವರು, ನಿಮ್ಮ ಪರಿಸರ ಯಾತ್ರೆಗೆ ನಾನೇನು ಕೊಡಬಲ್ಲೆ ಒಂದು ಧ್ಯೇಯವಾಕ್ಯ ನೀಡುತ್ತೇನೆ, "yes to Life, No to Death" ಇದು ನಿಮ್ಮ ಚಿಂತನೆಯಲ್ಲಿರಲಿ, ಇದೇ ಪರಿಸರದ ಉಳಿವಿಗೆ ದಾರಿ ತೋರುತ್ತದೆ ಎಂದರು.

ನಿಧಾನವಾಗಿ ಗುಂಡ್ಯ ಜಲವಿದ್ಯುತ್ ಯೋಜನೆ ಹಿನ್ನೆಲೆಗೆ ಸರಿಯಿತು.

ಆ ಸಂದರ್ಭದಲ್ಲಿ "ಆನೆದಾರಿಯಲ್ಲಿ ಅಲ್ಲೋಲ ಕಲ್ಲೋಲ" ಎಂಬ ಬೀದಿ ನಾಟಕವನ್ನು ನಾವು (ಜೈಕರ್ನಾಟಕ ಸಂಘ ಬೆಳ್ಳೇಕೆರೆ) ಸಿದ್ಧಪಡಿಸಿಕೊಂಡು ಹಲವು ಕಡೆಗಳಲ್ಲಿ ಪ್ರದರ್ಶನ ನೀಡಿದೆವು. ಮೈಸೂರಿನ ರಂಗಾಯಣದ ಬಹುರೂಪಿ ನಾಟಕೋತ್ಸವದಲ್ಲೂ ಇದನ್ನು ಪ್ರದರ್ಶಿಸಿದೆವು. ಸ್ವಲ್ಪ ಸಮಯದ ಹಿಂದಷ್ಟೇ ಮೈಸೂರು ನಗರಕ್ಕೇ ಕಾಡಾನೆ ನುಗ್ಗಿ ಬಂದು ಇಬ್ಬರು ಆನೆ ತುಳಿತಕ್ಕೆ ಬಲಿಯಾಗಿದ್ದರು.

ಮಲೆನಾಡಿನಲ್ಲಿ ಆನೆಗಳು ಅನೇಕ ವರ್ಷಗಳಿಂದಲೂ ಅರಣ್ಯದ ಅಂಚಿನ ಹಳ್ಳಿಗಳಿಗೆ ಬಂದು ಹೋಗುವುದು ಮಾಮೂಲಾದ ಸಂಗತಿ. ಮಲೆನಾಡಿನ ಜನ ಆನೆಯೊಂದೇ ಅಲ್ಲ ಅನೇಕ ಕಾಡುಪ್ರಾಣಿಗಳ ಜೊತೆಗೂ ಸಹಬಾಳ್ವೆಯನ್ನು ಸಾಧಿಸಿಕೊಂಡಿದ್ದರು. ಇಂದು ರಕ್ಷಿತಾರಣ್ಯವಾಗಿರುವ ಸಕಲೇಶಪುರ, ಮೂಡಿಗೆರೆ,

ಸೋಮವಾರಪೇಟೆ ತಾಲ್ಲೂಕುಗಳ ದಟ್ಟಅರಣ್ಯ ಪ್ರದೇಶದ ಭಾಗಗಳಲ್ಲಿ ಕೂಡಾ ಜನವಸತಿಗಳಿದ್ದವು. ಈ ಪ್ರದೇಶಗಳ ಚಂದ್ರಮಂಡಲ, ಮಣಿಭಿತ್ತಿ, ಅರಮನೆಗದ್ದೆ, ಕಬ್ಬಿನಾಲೆ, ಇಟ್ಟಿಗೆ ಗೂಡು, ಎಂಬ ಹೆಸರಿನ ಸ್ಥಳಗಳಿಗೆ ಹೋಗಿ ನೋಡಿದರೆ ಅಥವಾ ಇಂದುಕೂಡಾ ಜನವಸತಿಯಿರುವ ಮಂಜನಹಳ್ಳ, ಕುಮಾರಳ್ಳಿ, ಹೊಡಚಳ್ಳಿ, ಅತ್ತಿಹಳ್ಳಿ, ಜಗಾಟ ಮುಂತಾದ ಪ್ರದೇಶಗಳ ಜನರನ್ನು ಭೇಟಿಮಾಡಿದರೆ ಈ ವಿಷಯ ತಿಳಿಯತ್ತದೆ.

ಆದರೆ ಇತ್ತೀಚಿನ ವರ್ಷಗಳಲ್ಲಿ ಆನೆಗಳು ಮಾತ್ರವಲ್ಲ ಎಲ್ಲ ಕಾಡು ಪ್ರಾಣಿಗಳ ಬದುಕಿನ ವಿನ್ಯಾಸವೇ ಕಲಕಿಹೋಗಿದೆ. ಘಟ್ಟಪ್ರದೇಶಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಚಟುವಟಿಕೆಗಳು. ಮನುಷ್ಯನನ್ನೂ ಬದಲಿಸಿಬಿಟ್ಟಿವೆ. ಅರಣ್ಯದ ನಡುವೆ ಸಾಗಿಹೋಗುತ್ತಿರುವ, ನಾಗರಿಕತೆಯ ರಕ್ತನಾಳವಾಗಿರುವ ರೈಲ್ವೇ ಹಳಿಗಳ ಮೇಲೆ ಹಗಲೂ ರಾತ್ರಿ ಗೂಡ್ಸ್ ರೈಲುಗಳು ಆರ್ಭಟಿಸುತ್ತಿವೆ. ಘಟ್ಟ ಪ್ರದೇಶವನ್ನು ಸೀಳಿಕೊಂಡು ಸಾಗಿರುವ ಹೆದ್ದಾರಿಗಳಲ್ಲಿ ಸಾವಿರಗಳ ಸಂಖ್ಯೆಯಲ್ಲಿ ವಾಹನಗಳು ಸಂಚರಿಸುತ್ತಿವೆ.

ಹಲವು ಜಲವಿದ್ಯುತ್ ಯೋಜನೆಗಳು ದಟ್ಟ ಅರಣ್ಯದ ನಡುವೆಯೇ ಬಂದು ಕುಳಿತವು, ಅವುಗಳಿಗಾಗಿ ರಸ್ತೆ ಮಾಡಲು, ಸುರಂಗ ಕೊರೆಯಲು ದಿನವಿಡೀ ಬಂಡೆಗಳನ್ನು ಸಿಡಿಸಿದರು. ಅದರ ಸದ್ದಿಗೆ ವನ್ಯಜೀವಿಗಳೆಲ್ಲ ದಿಕ್ಕಾಪಾಲಾಗಿ ಹೋದವು. ಪರಂಪರಾಗತ ಆನೆದಾರಿಗಳು ತುಂಡರಿಸಿಹೋದವು. ಇಷ್ಟೆಲ್ಲ ಸಮಸ್ಯೆಗಳಿಗೆ, ಅನಾಹುತಗಳಿಗೆ ಸೇರ್ಪಡೆಯಾಗಿ, ಮಲೆನಾಡಿನಲ್ಲಿ ವ್ಯಾಪಕವಾಗಿ ತಲೆಯೆತ್ತಿರುವ, ರೆಸಾರ್ಟು, ಹೋಂ-ಸ್ಟೇಗಳು ನೀಡುತ್ತಿರುವ ಕೊಡುಗೆಯೂ ಸ್ವಲ್ಪಮಟ್ಟಿಗೆ ಇದೆ. ಇವುಗಳಿಂದಾಗಿ ಅರಣ್ಯ ಪ್ರದೇಶಗಳೊಳಗೆ ವ್ಯಾಪಕ ಜನಸಂಚಾರ, ವಾಹನಸಂಚಾರ ಹೆಚ್ಚಿರುವುದು ಮಾತ್ರವಲ್ಲ, ಕೆಲವೊಮ್ಮೆ ಮೋಟಾರ್ ರ್‍ಯಾಲಿಗಳು ಕೂಡಾ ಈ ಪ್ರದೇಶದಲ್ಲಿ ನಡೆಯುತ್ತವೆ. ಗಾಂಜಾ ಬೆಳೆ ಮತ್ತು ಕಳ್ಳನಾಟಾದಂದೆಯಂತಹ ಕಾನೂನುಬಾಹಿರ ಕೃತ್ಯಗಳು ಕೂಡಾ ಪಶ್ಚಿಮಘಟ್ಟ ಪ್ರದೇಶದಲ್ಲಿ ವನ್ಯಜೀವಿಗಳಿಗೆ ದೊಡ್ಡಪ್ರಮಾಣದಲ್ಲಿ ತೊಂದರೆಯನ್ನುಂಟುಮಾಡಿವೆ.

ಇಷ್ಟೆಲ್ಲ ಆಗುವಾಗಲೂ ನಮ್ಮ "ಯೆತ್ನಳ್ಳ" ತಣ್ಣಗೆ ಹರಿಯುತ್ತಲೇಇತ್ತು.

ಕೋಲಾರ- ತುಮಕೂರು ಪ್ರದೇಶಗಳಿಗೆ ನೀರೊದಗಿಸುವ ಪ್ರಸ್ತಾಪ ಬಂದಾಗಲೂ ಮೊದಲಿಗೆ ರಾಜಕಾರಣಿಗಳು ಹೇಳಿದ್ದು ಪಶ್ಚಿಮಕ್ಕೆ ಹರಿದು 'ವ್ಯರ್ಥ'ವಾಗುತ್ತಿರುವ ನೇತ್ರಾವತಿ ನದಿಯ ಬಗ್ಗೆಯೇ. ಆದರೆ ಜನರ ವಿರೋಧದ ಸುಳಿವು ಸಿಕ್ಕಿದೊಡನೆಯೇ ಅವರ ಭಾಷೆ ನುಡಿಕಟ್ಟುಗಳು ಬದಲಾದವು. ನೇತ್ರಾವತಿ ನದಿಯ ಬದಲಾಗಿ ಘಟ್ಟದ ಮೇಲ್ಭಾಗದಲ್ಲಿ ಪಶ್ಚಿಮದತ್ತ ಹರಿಯುವ ಎತ್ತಿನ ಹಳ್ಳದಂತಹ ಸಣ್ಣ ಸಣ್ಣ ಹೊಳೆಗಳನ್ನು ಒಗ್ಗೂಡಿಸಿ, ಬಯಲು ಸೀಮೆಯ ಜನರಿಗೆ ಕುಡಿಯುವ ನೀರೊದಗಿಸುವ ಅತ್ಯಂತ ಅಗತ್ಯದ ಯೋಜನೆಯಿದೆಂದು ಬಿಂಬಿಸಿದರು. ಮಲೆನಾಡಿನ ಮತ್ತು ಕರಾವಳಿಯ ಜನರಿಗೆ ಹೀಗೆ ಹೇಳಿ, ಬಯಲು ಸೀಮೆಯ ಜನರ ಮುಂದೆ ಇಪ್ಪತ್ತನಾಲ್ಕು ಟಿ.ಎಮ್.ಸಿ ನೀರಿನ ಚಿತ್ರಣ ನೀಡಿದರು. ಇಷ್ಟು ನೀರೊದಗಿಸುವ ಜಲಮೂಲ ಸಣ್ಣ "ಹಳ್ಳ"ವಾಗಿರಲು ಸಾಧ್ಯವಿಲ್ಲ ಎಂದೋ ಏನೋ. "ಎತ್ತಿನ ಹಳ್ಳ" ಮೊದಲು ರಾಜಕಾರಣಿಗಳ ಬಾಯಲ್ಲಿ ನಂತರ ವ್ಯಾಪಕವಾಗಿ ಮಾಧ್ಯಮಗಳಲ್ಲಿ "ಎತ್ತಿನಹೊಳೆ" ಯೋಜನೆಯಾಯಿತು.

ಹೀಗೆ ನಮ್ಮ "ಯೆತ್ನಳ್ಳ" ಎತ್ತಿನಹೊಳೆಯಾಗಿ ಲೋಕವಿಖ್ಯಾತವಾಯಿತು.

ಕಳೆದ ಮೂರು ದಶಕಗಳಲ್ಲಿ ಬೇರೆ ಕಡೆಗಳಂತೆ ಮಲೆನಾಡಿನಲ್ಲೂ ಜನಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ. ಇಲ್ಲಿನ ಯುವಜನರು ವಿದ್ಯಾವಂತರಾಗಿ, ಕುಶಲಕರ್ಮಿಗಳಾಗಿ ಬೇರೆಡೆಗೆ ಹೋಗಿದ್ದರೂ, ಗದ್ದೆ ಬೇಸಾಯವನ್ನುಳಿದು ಇತರ ಕಾಫಿ, ಮೆಣಸು, ಶುಂಠಿ ಮುಂತಾದ ವಾಣಿಜ್ಯ ಬೆಳೆಗಳ ಕೃಷಿ ಹೆಚ್ಚಾಗಿದೆ. ಯಂತ್ರೋಪಕರಣಗಳ ಬಳಕೆ, ನೀರಾವರಿ ಎರಡೂ ಹೆಚ್ಚಳವಾಗಿದ್ದು ನೀರಿನ ಬಳಕೆ ಗಣನೀಯವಾಗಿ ಹೆಚ್ಚಿದೆ. ಸಣ್ಣ ಮತ್ತು ಮಧ್ಯಮ ಗಾತ್ರದ ಕಾಫಿ ತೋಟಗಳು, ವ್ಯಾಪಕವಾಗಿ ಕಾರ್ಪೊರೇಟ್ ಧನಿಗಳ ಕೈಸೇರುತ್ತಿದೆ. ಇವರು ದೊಡ್ಡ ಪ್ರಮಾಣದಲ್ಲಿ ಹೊರರಾಜ್ಯಗಳಿಂದ ಕೂಲಿಕಾರ್ಮಿಕರನ್ನು ಕರೆತರುತ್ತಿರುವುದರಿಂದ, ಜನವಸತಿ ಹೆಚ್ಚಾಗುತ್ತಿದೆ. ಇದರೊಂದಿಗೆ ಸರ್ಕಾರದ ಅನೇಕ ಯೋಜನೆಗಳ ಮೂಲಕ ಸ್ವಂತ ನಿವೇಶನ-ಮನೆ ಹೊಂದಿದವರೂ ಹೆಚ್ಚಾಗಿದ್ದಾರೆ. ಇವೆಲ್ಲವೂ ಸೇರಿ ಮಲೆನಾಡಿನಲ್ಲೂ ಕೃಷಿ ಮಾತ್ರವಲ್ಲ ಕುಡಿಯುವ ನೀರಿನ ಬೇಡಿಕೆಯೂ ಹೆಚ್ಚಿದೆ. ಕಳೆದೆರಡು ದಶಕಗಳಲ್ಲಿ ಕೊರೆದ ಕೊಳವೆಬಾವಿಗಳು ನಿರುಪಯುಕ್ತವಾಗಿವೆ. ಆದ್ದರಿಂದ ಇಲ್ಲೂ ಸಹ ಹಳ್ಳ-ಹೊಳೆಗಳ ನೀರನ್ನೇ ಜನರು ಬಳಸತೊಡಗಿದ್ದಾರೆ.

ಎತ್ತಿನಹಳ್ಳದ ಜಲಾನಯನ ಪ್ರದೇಶದಲ್ಲೇ ಸುಮಾರು ಏಳೆಂಟು ಸಾವಿರ ಎಕರೆಗಳಷ್ಟು, ಕಾಫಿ ತೋಟಗಳಿವೆ. ಏಲಕ್ಕಿ ಮೆಣಸು, ಅಡಿಕೆ ಬೆಳೆಯೂ ಸಾಕಷ್ಟಿದೆ. ಈ ಪ್ರದೇಶದಲ್ಲೇ ಬರುವ ಹೆಗ್ಗದ್ದೆ, ದೋಣಿಗಾಲ್, ಕುಂಬರಡಿ, ನಡಹಳ್ಳಿ, ಹೆಬ್ಬಸಾಲೆ, ಮಾವಿನಕೂಲು, ಗಾಣದಹೊಳೆ, ರಕ್ಷಿದಿ. ಕ್ಯಾಮನಹಳ್ಳಿ, ಅಗಲಟ್ಟಿ ಮುಂತಾದ ಗ್ರಾಮಗಳಿವೆ. ಇವುಗಳಲ್ಲಿ ಹೆಚ್ಚಿನ ಗ್ರಾಮಗಳಿಗೆ ಕುಡಿಯುವ ನೀರಿಗೂ ಇಂದು ಎತ್ತಿನಹಳ್ಳದ ನೀರೇ ಆಧಾರ. ಈ ಎಲ್ಲಾ ಗ್ರಾಮಪಂಚಾಯತಿಗಳು ಕುಡಿಯುವನೀರಿನ ಯೋಜನೆಯಲ್ಲಿ ಎತ್ತಿನಹಳ್ಳದ ನೀರನ್ನು ಬಳಸುತ್ತಿವೆ. ಈ ಎಲ್ಲ ಕಾರಣಗಳಿಂದ ಕಡು ಬೇಸಗೆಯಲ್ಲಿ ಎತ್ತಿನಹಳ್ಳ ಸಂಪೂರ್ಣ ಬರಿದಾಗುವ ಹಂತ ತಲಪಿರುತ್ತದೆ.

ರಕ್ಷಿದಿ, ಅಗಲಟ್ಟಿ ಗ್ರಾಮಗಳಲ್ಲಿ ಹಾಗೂ ನಮ್ಮ ರಂಗಮಂದಿರದಲ್ಲಿ ಬಳಸುತ್ತಿರುವುದೂ ಎತ್ತಿನಹಳ್ಳದ ನೀರನ್ನೇ. ವೇದಿಕೆಗಳಿಂದ ಮಾತನಾಡುವಾಗೆಲ್ಲ ನಾವು 'ನಮಗಿದೇ ಗಂಗೆ, ಕಾವೇರಿ, ಗೋದಾವರಿ' ಎನ್ನುತ್ತೇವೆ.

ಇಷ್ಟೆಲ್ಲ ಇದ್ದರೂ ಗುಂಡ್ಯಜಲವಿದ್ಯುತ್ ಯೋಜನೆ ಅಥವಾ ಎತ್ತಿನಹೊಳೆ ತಿರುವು ಯೋಜನೆಗೆ ಸ್ಥಳೀಯರ ವಿರೋಧ ಕಡಿಮೆ. ಹೋರಾಟ-ಹಾರಾಟವೇನಿದ್ದರೂ ಹೊರಗಿನವರದ್ದು ಎಂಬ ಮಾತು ಆಗಾಗ, ಮಾಧ್ಯಮಗಳಲ್ಲಿ, ಮತ್ತು ಮುಖ್ಯವಾಗಿ ರಾಜಕಾರಣಿಗಳ ಮಾತಿನಲ್ಲಿ ಕೇಳಿಬರುತ್ತದೆ.

ಆದರೆ ಇವರೆಲ್ಲ ಹೇಳುತ್ತಿರುವಷ್ಟು ಸರಳವಾಗಿ ಈ ಸಮಸ್ಯೆ ಖಂಡಿತ ಇಲ್ಲ. ಮೊದಲನೆಯದಾಗಿ ಪರಿಸರವನ್ನು ಉಳಿಸಬೇಕೆನ್ನುವವರಲ್ಲೂ ಹಲವು ಅಭಿಪ್ರಾಯಗಳಿವೆ. ಇವರೆಲ್ಲರೂ ಪರಿಸರದ ಬಗ್ಗೆ ನಿಜವಾದ ಕಾಳಜಿಯನ್ನು ಇಟ್ಟುಕೊಂಡಿರುವವರೇ, ಆದರೆ ಆಧುನಿಕ ಜೀವನ ಕ್ರಮವನ್ನು ಒಪ್ಪಿಕೊಂಡ ಮೇಲೆ ಸ್ವಲ್ಪ ಮಟ್ಟಿನ ರಾಜಿ ಅನಿವಾರ್ಯ ಎನ್ನುವವರಿದ್ದಾರೆ. ನಮಗೆ ರಸ್ತೆ, ವಿದ್ಯುತ್, ಮುಂತಾದವು ಬೇಕೇಬೇಕು ಎಂದಮೇಲೆ ಅರಣ್ಯನಾಶವೂ ಅನಿವಾರ್ಯವಾದ್ದರಿಂದ ಮರಗಿಡಗಳನ್ನು ಬೆಳೆದರಾಯ್ತು

ಎಂದುಕೊಂಡವರಿದ್ದಾರೆ. ನೀರಿಲ್ಲದವರಿಗೆ ನೀರು ನೀಡುವುದು, ಪುಣ್ಯಕಾರ್ಯ ಎನ್ನುವವರಿದ್ದಾರೆ. ಹಾಗೇ ಪರಿಸರದ ವಿಚಾರದಲ್ಲಿ ಯಾವದೇ ರಾಜಿಗೂ ಸಿದ್ಧವಿಲ್ಲದವರೂ ಇದ್ದಾರೆ.

ಈ, ಎಲ್ಲ ವಿಚಾರಗಳನ್ನು ಬಿಟ್ಟು ಯೋಚನೆ ಮಾಡಿದರೂ ಕೂಡಾ ಈ ಜಲವಿದ್ಯುತ್ ಯೋಜನೆಗಳಿಗಾಗಲೀ, ನದೀತಿರುವು ಯೋಜನೆಗಳಿಗಾಗಲೀ, ಪಶ್ಚಿಮ ಘಟ್ಟಗಳ ಜೀವ ವೈವಿದ್ಯವನ್ನು ನಾಶ ಮಾಡುವ ಯಾವುದೇ ಯೋಜನೆಗೆ ಸ್ಥಳೀಯ ಕೃಷಿಕರಿಂದ ಅಥವಾ ಕೃಷಿಕಾರ್ಮಿಕರಿಂದ ಯಾಕೆ ವ್ಯಾಪಕವಾದ ವಿರೋಧ ಬರುತ್ತಿಲ್ಲ ?. ಇದಕ್ಕೆ ಹಲವು ಕಾರಣಗಳಿವೆ. ಪರಿಸರವಾದಿಗಳ ಸಂಘಟನಾತ್ಮಕ ಸಮಸ್ಯೆಗಳು ಸ್ವಲ್ಪಮಟ್ಟಿಗೆ ಕಾರಣವಿದ್ದರೆ. ಇನ್ನಿತರೆ ಕಾರಣಗಳು ಹಲವಿವೆ. ಮುಖ್ಯವಾಗಿ ಇಲ್ಲಿನ ಕೃಷಿಕರು ಹಲವು ರೀತಿಗಳಿಂದ ಬಳಲಿಹೋಗಿದ್ದಾರೆ. ಯಾವ ಕೃಷಿಯೂ ನಿರಂತರ ಲಾಭದಾಯಕವಲ್ಲದೆ ಕೃಷಿಕ ಸಾಲದಲ್ಲಿ ಮುಳುಗಿ ಹೋಗಿದ್ದಾನೆ. ಎಲ್ಲ ಸರ್ಕಾರಗಳು ಮೂಗಿಗೆ ತುಪ್ಪ ಸವರಿದಂತೆ ನೀಡಿದ ಯಾವುದೇ 'ಪ್ಯಾಕೇಜ್' ಅವನಿಗೆ ಭರವಸೆಯನ್ನು ತುಂಬಿಲ್ಲ. ಈಗಾಗಲೇ ಹಣದ ಅವಶ್ಯಕತೆಗಳಿಗಾಗಿಯೋ ಇನ್ನಾವುದೇ ಕಾರಣಕ್ಕೋ ತನ್ನ ಜಮೀನಿನಲ್ಲಿದ್ದ ಅಲ್ಪಸ್ವಲ್ಪ ಮರಗಳನ್ನು ಮಾರಾಟಮಾಡಿ, ಆ ಜಮೀನು ಕೂಡಾ ಭೂಸವಕಳಿಯಿಂದ ಬರಡಾಗಿದೆ. ಆ ಕಾರಣದಿಂದ ವರ್ಷಕ್ಕೆ ನೂರೈವತ್ತರಿಂದ ಇನ್ನೂರು ಇಂಚುಗಳಷ್ಟು ಮಳೆಯಾಗುವ ಆ ಪ್ರದೇಶದ ಪಾರಂಪರಿಕ ಬೆಳೆಗಳನ್ನು ಬೆಳೆಯಲಾರದ ಸ್ಥಿತಿ ತಲಪಿದ್ದಾನೆ. ಇದರೊಂದಿಗೆ ಈಗಾಗಲೇ ಅನುಷ್ಠಾನಕ್ಕೆ ಬಂದಿರುವ ಹಲವು ಯೋಜನೆಗಳಿಂದಾಗಿ ನಡೆದ ಅರಣ್ಯಪ್ರದೇಶದ ಅತಿಕ್ರಮಣದಿಂದಾಗಿ ಆನೆಯೊಂದೇ ಅಲ್ಲ ಇತರ ಕಾಡು ಪ್ರಾಣಿಗಳೂ ಊರೊಳಗೆ ಬರಲಾರಂಭಿಸಿವೆ. ಇವೆಲ್ಲದರ ಜೊತೆ ಕೃಷಿಗೆ ಕೆಲಸಗಾರರು ಸಿಗದಿರುವುದರಿಂದ ಕೃಷಿಕ ಇನ್ನಷ್ಟು ಸೋತು ಹೋಗಿದ್ದಾನೆ. ಘಟ್ಟಪ್ರದೇಶದ ದುರ್ಗಮ ನೆಲೆಯಲ್ಲಿರುವ ತನ್ನ ಜಮೀನನ್ನು ಮಾರಾಟ ಮಾಡಿ ಹೋಗೋಣವೆಂದರೆ, ಜಮೀನನ್ನು ಕೊಳ್ಳುವವರಿಲ್ಲದೆ ಕೃಷಿಕ ನಿರಾಶನಾಗಿ ಕುಳಿತಿದ್ದಾನೆ. (ಈ ಭಾಗದ ಜಮೀನನ್ನು ಕಾರ್ಪೊರೇಟ್ ವಲಯದವರೂ ಸಹ ಖರೀದಿಸುತ್ತಿಲ್ಲ). ಇಂತಹ ಸಂದರ್ಭದಲ್ಲಿ ಅಲ್ಲಿಗೆ ಬರುವ ಯಾವುದೇ ಯೋಜನೆ ಅವನಿಗೆ ಹೊಸ ಆಸೆಗಳನ್ನು ತರುತ್ತದೆ. ಹೇಗೂ ಮಾರಲು ಅಸಾಧ್ಯವಾಗಿರುವ ತನ್ನ ಜಮೀನಿಗೆ ಒಳ್ಳೆಯ ಪರಿಹಾರಧನ ದೊರಕಿ ತಾನು ಇಲ್ಲಿಂದ ಮುಕ್ತಿಪಡೆಯಬಹುದು, ಇಲ್ಲವೇ ಯೋಜನೆಗಳಿಂದಾಗಿ ಇಲ್ಲಿಗೆ ಬರುವ ಜನರ ಸಂಖ್ಯೆ ಹೆಚ್ಚಾಗುವುದರಿಂದ ಬೇರೇನಾದರೂ ಕೆಲಸವೋ ವ್ಯಾಪಾರವೋ ಮಾಡಬಹುದೆಂಬ ಹವಣಿಕೆಯಲ್ಲಿದ್ದಾನೆ. ಇವರಲ್ಲಿ ಕೆಲವರ ಮಕ್ಕಳು ವಿದ್ಯಾಭ್ಯಾಸ ಮುಗಿಸಿ ಈಗಾಗಲೇ ಇಲ್ಲಿಂದ ದೂರವಾಗಿದ್ದಾರೆ. ಪ್ರತೀ ಬಾರಿಯೂ ಈ ಯೋಜನೆಗಳ ವಿಚಾರ ಜನಾಭಿಪ್ರಾಯ ಸಂಗ್ರಹ ಸಭೆಗಳಲ್ಲಿ ಮತ್ತು ಇನ್ನಿತರ ಮಾಧ್ಯಮಗಳಲ್ಲಿ ಇವರು ತಮ್ಮ ಅಸಹಾಯಕತೆ ಮತ್ತು ಅಳಲನ್ನು ತೋಡಿಕೊಳ್ಳುತ್ತಿದ್ದಾರೆ. ಸಾಧ್ಯವಿದ್ದವರು ಈಗಾಗಲೇ ತಮ್ಮ ಕಾಫಿ ತೋಟಗಳನ್ನು ಉದ್ಯಮಿಗಳಿಗೆ ಮಾರಿದ್ದಾರೆ. ಅಲ್ಲೆಲ್ಲ ರೆಸಾರ್ಟುಗಳು ಪ್ರಾರಂಭವಾಗಿವೆ. ಹೇಗಾದರೂ ಇಲ್ಲಿಂದ ಬಿಡುಗಡೆ ದೊರೆಯಲಿ ಎಂಬ ಹತಾಶ ಸ್ಥಿತಿಯಲ್ಲಿ, ಈ ಎಲ್ಲ ಪರಿಸರ ನಾಶದ ಯೋಜನೆಗಳನ್ನು ಪ್ರಬಲವಾಗಿ

ಸಮರ್ಥಿಸುತ್ತಿರುವ ಇವರ ದೌರ್ಭಾಗ್ಯವನ್ನು ಅರ್ಥಮಾಡಿಕೊಂಡು, ಅವರಿಗೆ ಅತ್ಯಂತ ಹೆಚ್ಚಿನ ಪರಿಹಾರವನ್ನು ಕೊಟ್ಟು ಅವರು ಬೇರೆಡೆಗೆ ಹೋಗಲು ಅನುವು ಮಾಡಿಕೊಡಬೇಕು.

ದೊಡ್ಡ ಕೈಗಾರಿಕೆಗಳಿಗೆ ಕೊಡುತ್ತಿರುವ ರಿಯಾಯಿತಿಗಳ ಮುಂದೆ ಈ ಮೊತ್ತ ನಗಣ್ಯವಾದುದು. ಯಾವುದೇ ಯೋಜನೆಯಲ್ಲಿ ಸ್ಥಳಾಂತರಿಸ ಬೇಕಾಗಿರುವ ಎಲ್ಲ ಜನರಿಗೆ ಕೊಡಬೇಕಾದ ಪರಿಹಾರದ ಮೊತ್ತ ಕೆಲವು ಕೋಟಿ ರೂಪಾಯಿಗಳು ಮಾತ್ರವಾಗಿರುತ್ತದೆ.

ಇನ್ನು ಇಲ್ಲಿರುವ ಹಳೆಯ ತಲೆಮಾರಿನ ಸ್ಥಳೀಯ ಕೂಲಿ ಕಾರ್ಮಿಕರಾದರೂ ಅಷ್ಟೆ ಹೆಚ್ಚಿನವರು ಅಧಿಕ ಕೂಲಿದೊರೆಯುವ ಇತರ ಪ್ರದೇಶಗಳಿಗೋ ನಗರಗಳಿಗೋ ಹೋಗಿದ್ದಾರೆ. ಹೊಸ ಯೋಜನೆಗಳೇನಾದರೂ ಬಂದರೆ ಇನ್ನೂ ಉತ್ತಮ ಕೂಲಿ ದೊರೆಯುವ ನಿರೀಕ್ಷೆಯಲ್ಲಿ ಇವರಿದ್ದರೆ, ಸಣ್ಣ ಪುಟ್ಟ ವ್ಯಾಪಾರಿಗಳು ಟೀ ಅಂಗಡಿಗಳವರು ಇದೇ ಮನಸ್ಥಿತಿಯಲ್ಲಿದ್ದಾರೆ. ಇವರೆಲ್ಲ ಯಾವುದೇ ದೂರಗಾಮೀ ಪರಿಣಾಮಗಳ ಬಗ್ಗೆ ಯೋಚಿಸದೆ ತಮ್ಮ ಬದುಕು ಉತ್ತಮಗೊಂಡೀತೆಂಬ ಮನುಷ್ಯ ಸಹಜ ಆಸೆಯಿಂದ ಈ ಯೋಜನೆಗಳನ್ನು ಸ್ವಾಗತಿಸುತ್ತ ಕುಳಿತಿದ್ದಾರೆ.

ಇದಕ್ಕಿಂತ ಶಕ್ತಿಶಾಲಿ, ಪ್ರಭಾವಶಾಲಿ ಗುಂಪೊಂದಿದೆ. ಇವರಲ್ಲಿ ಕೆಲವರು ನೇರವಾಗಿ ಅಭಿವೃದ್ಧಿಯ ಹರಿಕಾರರಂತೆ ಮಾತನಾಡುತ್ತ ಈ ಎಲ್ಲ ಯೋಜನೆಗಳನ್ನು ನೇರವಾಗಿ ಸಮರ್ಥಿಸುತ್ತ ಈ ಮೊದಲು ತಿಳಿಸಿದ, ಸ್ವಲ್ಪ ಮಟ್ಟಿಗೆ ರಾಜಿ ಅನಿವಾರ್ಯ ಎನ್ನುವ, ಪ್ರಗತಿಪರರ ಹಾಗೂ ಬುದ್ಧಿಜೀವಿಗಳ ಮಾತನ್ನು ತಮ್ಮ ಸಮರ್ಥನೆಗಾಗಿ ಬಳಸಿಕೊಳ್ಳುತ್ತಾರೆ. ಇನ್ನು ಕೆಲವರು ಇವರಿಗಿಂತಲೂ ಹೆಚ್ಚು ಅಪಾಯಕಾರಿಗಳು. ಇವರು ಈ ಯೋಜನೆಗಳನ್ನು ವಿರೋಧಿಸುವವರ ಜೊತೆಯಲ್ಲಿ ಕಾಣಿಸಿಕೊಳ್ಳುತ್ತಾ, ಈ ಎಲ್ಲ ಯೋಜನೆಗಳ ಅನುಷ್ಠಾನವಾದರೆ ತಮಗೆ ದೊರೆಯಬಹುದಾದ ಲಾಭದ ಲೆಕ್ಕಾಚಾರದಲ್ಲಿರುತ್ತಾರೆ.

ಇವರುಗಳು ಮಾತ್ರವಲ್ಲ, ಈ ಎಲ್ಲ ಯೋಜನೆಗಳಿಂದ ಲಾಭಪಡೆಯುವವರು, ಇನ್ನೂ ಅನೇಕರಿದ್ದಾರೆ. ಇವರಲ್ಲಿ ಗುತ್ತಿಗೆದಾರರದು, ಮರದ ವ್ಯಾಪಾರಿಗಳು, ಮರಳು ದಂಧೆಯವರು, ಗ್ರಾನೈಟ್ ಗಣಿಗಾರಿಕೆಯವರು, ರಿಯಲ್ ಎಸ್ಟೇಟ್ ದಳ್ಳಾಳಿಗಳು, ಮತ್ತು ಇವರಿಂದ ಲಾಭ ಪಡೆಯುತ್ತಿರುವ ಅನೇಕ ಸ್ಥಳೀಯರು ಮತ್ತು ಕೆಲವರು ಪರ್ತಕರ್ತರೂ ಇದ್ದಾರೆ. ಇವರಿಗೆ ಜಲವಿದ್ಯುತ್ ಯೋಜನೆಯಾಗಲೀ, ನದೀ ತಿರುವು ಯೋಜನೆಯಾಗಲೀ, ರಸ್ತೆ ನಿರ್ಮಾಣವಾಗಲೀ ಯಾವ ವ್ಯತ್ಯಾಸವೂ ಇಲ್ಲ. ಯಾವುದೇ ಯೋಜನೆ ಇವರ ಪಾಲಿಗೆ ಹಿಂಡುವ ಹಸುವಾಗಬಲ್ಲದು. ಇವರುಗಳು ಬಹಳ ಸಮರ್ಥವಾಗಿ ಸ್ಥಳೀಯ ಜನರಲ್ಲಿ ಹೊಸ ಆಸೆ–ಆಕಾಂಕ್ಷೆಗಳನ್ನು ತುಂಬಬಲ್ಲರು. ಈ ಕಾರಣಗಳಿಂದಾಗಿ ಈ ಎಲ್ಲ ಯೋಜನೆಗಳ ವಿರೋಧವಾಗಿ ಸಭೆ, ಜಾತಾ, ಸತ್ಯಾಗ್ರಹ, ಜನಾಭಿಪ್ರಾಯ ಸಂಗ್ರಹ ಸಭೆ ಏನೇ ನಡೆಯಲಿ, ಸ್ಥಳೀಯ ಕೃಷಿಕ–ಕಾರ್ಮಿಕರಿಂದ ದೊಡ್ಡ ಪ್ರಮಾಣದ ಬೆಂಬಲ ಸಿಗುತ್ತಿಲ್ಲ, ಆದ್ದರಿಂದ ಈ ಕಾರ್ಯಕ್ರಮಗಳಲ್ಲಿ ಹೊರಗಿನವರ ಸಂಖ್ಯೆಯೇ ಹೆಚ್ಚಾಗಿ ಕಾಣಸಿಗುತ್ತದೆ ಇದರಿಂದಾಗಿ ಈ ಯೋಜನೆಗಳಿಗೆ ಸ್ಥಳೀಯರ ವಿರೋಧವಿಲ್ಲ, ಈ ಪರಿಸರವಾದಿಗಳು ಹೊರಗಿನವರು, ಹೊಟ್ಟೆ ತುಂಬಿದ ಸುಶಿಕ್ಷಿತರು, ಮೇಲ್ವರ್ಗದ ಜನ, ಇತ್ಯಾದಿ ವಾದಗಳು ಹುಟ್ಟಿಕೊಳ್ಳುತ್ತಿವೆ.

ಕೆಲವು ತಿಂಗಳ ಹಿಂದೆ ತುಮಕೂರಿನ ಶಾಲೆಯೊಂದರ ಮಕ್ಕಳು ಎತ್ತಿನಹೊಳೆ ಯೋಜನೆಯ ಬಗ್ಗೆ ಮತ್ತು ಎತ್ತಿನಹೊಳೆ ಪರಿಸರದ ಅಧ್ಯಯನಕ್ಕಾಗಿ ಬಂದಿದ್ದರು ಮೂರುದಿನಗಳಕಾಲ ನಮ್ಮ ರಂಗ ಮಂದಿರದಲ್ಲಿ ಉಳಿದು, ಎತ್ತಿನಹಳ್ಳ ಹುಟ್ಟುವಲ್ಲಿಂದ ಕೆಂಪೊಳೆ ಸೇರುವ ತನಕದ ಒಟ್ಟು ಜಲಾನಯನ ಪ್ರದೇಶದಲ್ಲಿ ತಿರುಗಾಡಿದರು. ಜೀವ ವೈವಿಧ್ಯವನ್ನೆಲ್ಲ ನೋಡಿದರು. ದಾಖಲಿಸಿದರು. ಪೋಟೋತೆಗೆದುಕೊಂಡರು. ಇಲ್ಲಿಯ ನೆಲದ ವಿಸ್ತೀರ್ಣ, ಹಾಗೂ ಅದೇಸ್ಥಳದ ಮೇಲ್(ಏರಿಯಲ್)ವಿಸ್ತೀರ್ಣ, ಮಳೆಮಾಪನ ವಿಧಾನಗಳು, (ಕಾಫಿ ತೋಟಗಳಲ್ಲಿ ಪ್ರತಿದಿನ ಮಳೆಮಾಪನ ಮಾಡುವುದು ಬ್ರಿಟಿಷರ ಕಾಲದಿಂದಲೂ ನಡೆದು ಬಂದಿದೆ). ಒಂದು ಟಿ.ಎಮ್.ಸಿ ನೀರೆಂದರೆ ಎಷ್ಟು?. ವರ್ಷಕ್ಕೆ ಸರಾಸರಿ ನೂರರಿಂದ ನೂರಿಪ್ಪತ್ತು ಇಂಚುಗಳಷ್ಟು ಮಳೆಬೀಳುವ ಈ ಜಲಾನಯನ ಪ್ರದೇಶದಲ್ಲಿ ಒಂದು ಮಳೆಗಾಲದಲ್ಲಿ ಭೂಮಿಗೆ ಬೀಳುವ ನೀರಿನ ಒಟ್ಟು ಮೊತ್ತ. ಅದರಲ್ಲಿ ಆವಿಯಾಗುವ ಪ್ರಮಾಣ, ಭೂಮಿಯಲ್ಲಿ ಇಂಗುವ ಪ್ರಮಾಣ, ಈ ಪ್ರದೇಶದ ಜೀವರಾಶಿಗೆ ಬಳಕೆಗೆ ಬೇಕಾದ ನೀರು ಇವೆಲ್ಲವನ್ನೂ ಕಳೆದು, ಹೆಚ್ಚುವರಿಯಾಗಿ ಸಿಗಬಹುದಾದ ನೀರು ಹೀಗೆ ಎಲ್ಲವನ್ನೂ ತಾವೇ ಪ್ರಾಯೋಗಿಕವಾಗಿ ನೋಡಿ ಕಲಿತು, ಕೊಳವೆಗಳ ಮೂಲಕ ಸಾಗಿಸಬಹುದಾದ ನೀರು ಎತ್ತಿನ ಹಳ್ಳದಲ್ಲಿ ದೊರಕುವುದು ಕೇವಲ ಮೂರರಿಂದ ಮೂರೂವರೆ ಟಿ.ಎಮ್.ಸಿ. ಮಾತ್ರ ಎಂದು ಲೆಕ್ಕಹಾಕಿದರು. ಎತ್ತಿನಹಳ್ಳವಲ್ಲದೆ, ಸರ್ಕಾರ ಹೇಳುವ ಕಾಡುಮನೆಹಳ್ಳ, ಕೆಂಕೇರಿಹಳ್ಳ, ಮಂಜನಹಳ್ಳ ಸೇರಿದರೂ ಒಟ್ಟು ನೀರಿನ ಮೊತ್ತ ಎಂಟರಿಂದ ಒಂಭತ್ತು ಟಿ.ಎಮ್.ಸಿ ಮೀರಲಾರದೆಂದು ತೀರ್ಮಾನಿಸಿದರು. ಅಂದರೆ ಈಗಾಗಲೇ ತಯಾರಿಸಿಟ್ಟಿರುವ ಬೃಹತ್ ಗಾತ್ರದ ಕೊಳವೆಗಳಿಗೂ ಇಲ್ಲಿರುವ ನೀರಿನ ಪ್ರಮಾಣಕ್ಕೂ ತಾಳೆಯಾಗುವುದಿಲ್ಲವೆಂದು. ಅವರಿಗೂ ಅರಿವಾಯ್ತು. ಇಪ್ಪತ್ತನಾಲ್ಕು ಟಿ.ಎಮ್.ಸಿ. ನೀರು ದೊರೆಯಬೇಕಾದರೆ ಘಟ್ಟದ ಕೆಳಗಿನ ನೇತ್ರಾವತಿಯನ್ನೋ ಕುಮಾರಧಾರೆಯನ್ನೋ ತಿರುಗಿಸುವುದು ಅನಿವಾರ್ಯವೆಂದು, ಅದರಿಂದ ಅಲ್ಲಿನ ಪರಿಸರಕ್ಕೆ ಇನ್ನೂ ಹೆಚ್ಚಿನ ಹಾನಿ ಆಗಲಿದೆ ಎಂದು ಮಕ್ಕಳು ಅಭಿಪ್ರಾಯಪಟ್ಟರು.

ಈ ಮಕ್ಕಳೆಲ್ಲ ಎತ್ತಿನಹೊಳೆ ಯೋಜನೆಯ ಫಲಾನುಭವಿ ಪ್ರದೇಶಗಳ ಮಕ್ಕಳು, ಇವರೊಂದಿಗೆ ನಮ್ಮೂರ ಶಾಲೆಯ ಅದೇ ವಯಸ್ಸಿನ ಮಕ್ಕಳೊಂದಿಗೆ ಮಾತನಾಡಲು ಬಿಟ್ಟೆವು. ಮಕ್ಕಳು ಅವರವರೇ ಮಾತಾಡಿ ಕೊನೆಗೆ ತೀರ್ಮಾನಿಸಿದ್ದೆಂದರೆ "ತುಮಕೂರಿನ ನೀರಿನ ಸಮಸ್ಯೆ ಅಲ್ಲಿಯ ಜನರು ಅಲ್ಲೇ ಪರಿಹಾರ ಕಂಡುಕೊಳ್ಳಬೇಕು... ಹಾಗೇ ಮಲೆನಾಡಿನ ಜನ ತಮ್ಮ ಪ್ರಾಣಿಗಳಕಾಟ ಇತ್ಯಾದಿ ಸಮಸ್ಯೆಗಳನ್ನು ನಾವೇ ಬಗೆಹರಿಸಿಕೊಳ್ಳಬೇಕು"ಎಂದು.

ಇವರೆಲ್ಲ ಪ್ರೌಢಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳು. ಆ ಮಕ್ಕಳಿಗಿರುವ ಅರಿವು-ಕಾಳಜಿ ನಮಗಿದ್ದಿದ್ದರೆ..........

ಕೇಂದ್ರ ಸರ್ಕಾರವೀಗ ಹಸಿರುನಾಶಕ್ಕೆ ಹಸಿರು ನಿಶಾನೆ ತೋರಿದೆ. ನಮ್ಮ ರಂಗತಂಡ "ಎತ್ತಿನ ಹೊಳೆ" ಎಂಬ ನಾಟಕವನ್ನು ರಚಿಸಿಕೊಂಡು ತಾಲೀಮಿನಲ್ಲಿ ತೊಡಗಿದೆ.

–

(ಮಾತುಕತೆ ಸಾಭಾರ)

ಕೈವಲ್ಯಸಿದ್ಧಿ ಕೊಡುವುದರಲ್ಲಿಯೇ ಹೊರತು, ಪಡೆಯುವುದರಲ್ಲಿ ಅಲ್ಲ

– ಜ.ಹೊ. ನಾರಾಯಣಸ್ವಾಮಿ

ಸಾಯುಜ್ಯ ಹೊಂದುವುದು ಕೊಡುವುದರಲ್ಲಿಯೇ ಹೊರತು ಪಡೆಯುವುದರಲ್ಲಿಲ್ಲ. ಸಾಯುಜ್ಯ ಎಂದರೆ ಭಗವಂತನಲ್ಲಿ ಒಂದಾಗುವುದು. ತ್ಯಾಗವಿದ್ದಲ್ಲಿ ಯೋಗ ಪ್ರಾಪ್ತಿಯಾಗುತ್ತದೆ. ಭೋಗವಿದ್ದಲ್ಲಿ ರೋಗ ಪ್ರಾಪ್ತವಾಗುತ್ತದೆ.

ತೆರೆದ ಹೃದಯದ ಪ್ರಕೃತಿಯದು ಕೊಡುಗೈ. ಪಡೆದುಕೊಳ್ಳುವುದಕ್ಕಿಂತ ಹೆಚ್ಚಾಗಿ ಕೊಡುವುದು ಅದರ ಅಂತರಂಗ. ಹಣ್ಣು ಕೊಡುವ ಮರಗಳು ತಾವು ಬಿಟ್ಟ ಹಣ್ಣನ್ನು ತಾವೇ ತಿನ್ನುವುದಿಲ್ಲ. ಹೂ ಬಿಡುವ ಗಿಡಗಳು ಹೂವನ್ನು ಹೊತ್ತು ನಲಿಯುತ್ತವೆಯೇ ಹೊರತು ಕಿತ್ತು ಮುಡಿಯುವುದಿಲ್ಲ. ಭಗವಂತನಿಗೆ ಎಂದು ಅರ್ಪಿಸುವ ಹೂಗಳ ಸುಗಂಧ ಭಗವಂತನಿಗಿಂತ ಮೊದಲು ತಲುಪುವುದು ಭಕ್ತನ ಕೈಗೆ. ಈ ಸೃಷ್ಠಿಗೆ ಕಾರಣವಾಗಿರುವ ಅವ್ಯಕ್ತ ಶಕ್ತಿಯ ನಿಯತಿ ಇದು. ಅದರದು ಕೊಡುಗೈಯೇ ಹೊರತು ಹಿಡಿಗೈ ಅಲ್ಲ. ಈ ಸೂತ್ರದ ಸತ್ಯವನ್ನರಿತು ಅದನ್ನು ಅಪ್ಪಿಕೊಳ್ಳುವುದರಲ್ಲಿಯೇ ಸಾಯುಜ್ಯ ಹೊಂದಬಹುದು.

ಮಹಾಭಾರತದಲ್ಲಿ ಬರುವ ಏಕಲವ್ಯ ಪ್ರಸಂಗ ತ್ಯಾಗದ ದೃಷ್ಠಿಯಿಂದ ಮನನೀಯವಾದುದು. ಗುರು ದ್ರೋಣರು ಏಕಲವ್ಯನಿಗೆ ಬಿಲ್ವಿದ್ಯೆ ಹೇಳಿಕೊಡಲು ಜಾತಿ ಕಾರಣಕ್ಕಾಗಿ ನೀರಾಕರಿಸಿದಾಗ ಏಕಲವ್ಯ ಕ್ರೋಧಗೊಳ್ಳಲಿಲ್ಲ. ಬದಲಿಗೆ ಗುರುಭಕ್ತಿಯನ್ನು ಹೃದಯದಲ್ಲಿ ಹೊತ್ತು ಅವರ ಪ್ರತಿಮೆಯ ಮುಂದೆ ಪ್ರಕೃತಿಯನ್ನು ನಂಬಿ ತನ್ನಿಂದ ತಾನೆ ವಿದ್ಯೆ ಕಲಿತ. ವಿದ್ಯೆ ನಿರಾಕರಿಸಿದ ಗುರುವನ್ನೇ ತನ್ನ ಹೃದಯದಲ್ಲಿ ಸ್ವೀಕರಿಸುವ ನೆಲೆಯಲ್ಲಿಯೇ ಏಕಲವ್ಯನ ಮಹತ್ತು ಮನೆಮಾಡಿದೆ. ಕುವೆಂಪು ಅವರ ಏಕಲವ್ಯ ಹೇಳುವಂತೆ, 'ಪಡೆವುದೆಲ್ಲಮಂ ಕೊಡುವುದಕ್ಕಲ್ತೆ ಆರ್ಯ, ಪೂರ್ಣಮಂ ಕೊಡದೆ ಪಡೆದಪೆವೆಂತು ಪೂರ್ಣಮಂ' ಎನ್ನುವ ಮಾತಿನಲ್ಲಿ ಅಡಗಿರುವ ತ್ಯಾಗದ ಪೂರ್ಣತತ್ವ ಪ್ರಕಟಗೊಳ್ಳುತ್ತದೆ. ಆದರೆ ಅದು ದ್ರೋಣಾರ್ಜುನರಲ್ಲಿ ಗೋಚರಿಸುವುದಿಲ್ಲ. ಏಕೆಂದರೆ ಏಕಲವ್ಯನದು ತ್ಯಾಗದ ನೆಲೆಯಾದರೆ, ದ್ರೋಣಾರ್ಜುನರದ್ದು ಭೋಗದ ಸೆಲೆ. ಸಹಪಾಠಿಯಾಗಿದ್ದ

ದ್ರುಪದ ಸಹಾಯಹಸ್ತವನ್ನು ಚಾಚಲಿಲ್ಲ ಎಂದು ಅವನ ಮೇಲೆ ದ್ರೋಣರಿಗೆ ಸೇಡು. ಕೊಟ್ಟ ವಚನವನ್ನು ಉಳಿಸಿಕೊಳ್ಳಲಿಲ್ಲವೆಂದು ಗುರು ದ್ರೋಣರ ಮೇಲೆ ಸಿಡಿಮಿಡಿಗೊಳ್ಳುವುದು ಅರ್ಜುನನ ಪಾಡು. ಹಾಗಾಗಿ ತನ್ನಿಂದ ತಾನೆ ಪಡೆದುಕೊಂಡು ಗುರು ಕಾಣಿಕೆಯ ರೂಪದಲ್ಲಿ ತ್ಯಾಗಮಾಡಿದ ಏಕಲವ್ಯ ಪ್ರಕೃತಿಯ ಪ್ರತಿರೂಪವಾದರೆ, ದ್ರೋಣಾರ್ಜುನರ ಹೃದಯಗಳು ಸೇಡನ್ನು ಹೊತ್ತು ಲೌಕಿಕದ ಸೆಣಸಾಟದಲ್ಲಿ ಬೀಡಾಗುತ್ತದೆ. ತನ್ನನು ಇಲ್ಲವಾಗಿಸಿಕೊಂಡು ಎಲ್ಲವಾದವನು ಏಕಲವ್ಯನಾದರೆ, ಸೇಡಿನ ಪಾಡಿನಲ್ಲಿ ಬಸವಳಿದು ಬೆಂದು ಇಲ್ಲವಾದವರು ದ್ರೋಣಾರ್ಜುನರು. ಏಕಲವ್ಯ ಪ್ರಕೃತಿಯ ಪ್ರಕೃತಿಯಾದರೆ, ದ್ರೋಣಾರ್ಜುನರು ಲೌಕಿಕ ವಿಕೃತಿಯ ಪ್ರತಿರೂಪವಾಗಿದ್ದಾರೆ.

ಜಾಗತೀಕರಣ ಇಂದು ಜನಜೀವನವನ್ನು ಜಾಲಾಡುತ್ತಿದೆ. ಅಂತಃಕರಣ ಇರದ ಜಾಗತೀಕರಣ ಸಂಸ್ಕೃತಿಯು ಸುಕೃತಿಯಿಂದ ವಿಮುಖವಾಗಿ ವ್ಯಾಪಾರೀಕರಣದ ವಿಕೃತಿಯಿಂದ ವಿಜೃಂಭಿಸುತ್ತಿದೆ. ಏಕಲವ್ಯನಂತೆ ಕೊಡುಗೈಯಾಗದ ದೇಶಗಳು ದ್ರೋಣಾರ್ಜುನರಂತೆ ಪಡೆದುಕೊಳ್ಳುವುದರಲ್ಲೇ ನಿತ್ಯನಿರತವಾಗಿವೆ.

ಜಾಗತೀಕರಣವನ್ನು ಸ್ವಾಮೀ ವಿವೇಕಾನಂದರು ಕನಸಿದ್ದರು ಅವರು ಕನಸಿದ ಜಾಗತೀಕರಣ ಅನನ್ಯವಾದುದು. ವಿವೇಕಾನಂದರು ಹೇಳುತ್ತಾರೆ, 'ಶತಶತ ಮಾನಗಳಿಂದ, ತಲೆತಲೆಮಾರುಗಳಿಂದ ಪ್ರಪಂಚದ ಎರಡು ಭಾಗಗಳಲ್ಲಿ ಎರಡು ಅದ್ಭುತ ಶಕ್ತಿಗಳು ಗೋಚರಗೊಂಡಿವೆ. ಒಂದು ಪಾಶ್ಚಾತ್ಯ, ಮತ್ತೊಂದು ಪೌರಾತ್ಯ. ಪಾಶ್ಚಾತ್ಯರು ತಮ್ಮ ದೇಹಬಲದಿಂದ ಭೌತಿಕ ಜಗತ್ತನ್ನು ನಿಗ್ರಹಿಸಿದ್ದಾರೆ. ಅವರು ಸಮುದ್ರ ಆಳಕ್ಕೂ ಇಳಿಯಬಲ್ಲರು. ಹಾಗೆ ಆಕಾಶದ ಎತ್ತರಕ್ಕೂ ಏರಬಲ್ಲರು. ಹಾಗೆ ಪೌರಾತ್ಯರು ತಮ್ಮ ತಪಃಶಕ್ತಿಯಿಂದ ಆಂತರಿಕ ಜಗತ್ತನ್ನು ಸಿದ್ಧಿಸಿಕೊಂಡಿದ್ದಾರೆ. ಈ ಎರಡೂ ಸಿದ್ಧಿಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದರ ಮೂಲಕ ನವಜನಾಂಗ ಭೂಮಿಯ ಮೇಲೆ ಉದಯಿಸಬೇಕು ಎನ್ನುವುದು ಅವರ ಕನಸಿದ ಜಾಗತೀಕರಣವಾಗಿತ್ತು. ಅವರಲ್ಲಿ ಆ ಆಶಯ ಭೂಮಿಯ ಮೇಲಿನ ಮನುಷ್ಯನ ಸಾರ್ಥಕ ಬದುಕಿನ ಸೂತ್ರವಾಗಿದೆ. ಅದನ್ನು ಕುರಿತ ಚಿಂತಿಸಿ ಮಾನ್ಯಮಾಡುವುದರಲೇ ಮನುಕುಲ ಮಂಗಳ ಮನೆಮಾಡಿದೆ. ಪ್ರಸ್ತುತ ವ್ಯಾಪಾರೀಕರಣದ ಜಾಗತೀಕರಣ ಮನುಕುಲದ ಶೋಷಣೆಯ ನೆಲೆಯದ್ದಾದರೆ, ವಿವೇಕಾನಂದ ಪ್ರಣೀತ ಜಾಗತೀಕರಣ ಮನುಕುಲದ ಪೋಷಣೆಯ ನೆಲೆಯದ್ದಾಗಿದೆ.

ಕವಿಯೂ, ತತ್ವಜ್ಞಾನಿಯೂ ಆದ ಭರ್ತೃಹರಿ ನಾಲ್ಕು ವಿಧದ ವ್ಯಕ್ತಿಗಳನ್ನು

ಕುರಿತು ಹೇಳಿದ್ದಾನೆ. ಕಾರಣವಿಲ್ಲದೆ ಇತರರನ್ನು ನಾಶಮಾಡುವವನು ಕನಿಷ್ಠನಾದವನು. ತನ್ನ ಸ್ವಾರ್ಥಸಾಧನೆಗಾಗಿ ಇತರರ ಆಸಕ್ತಿಯನ್ನು ಕೊಲ್ಲುವವನು ದೈತ್ಯ. ತನ್ನ ಆಸಕ್ತಿಯನ್ನು ಕಾಪಾಡಿಕೊಳ್ಳುತ್ತಲೇ ಇತರರ ಆಸಕ್ತಿಯನ್ನು ಪರಿಗಣಿಸುವವನು ಸಾಮಾನ್ಯ ಮನುಷ್ಯ. ಇತರರ ಆಸಕ್ತಿಗಾಗಿ ತನ್ನ ಹಿತಾಸಕ್ತಿಯನ್ನು ತ್ಯಾಗಮಾಡುವವನು ಅಸಾಮಾನ್ಯ ಹಾಗೂ ಶ್ರೇಷ್ಠನಾದವನು. ಪರರಿಗಾಗಿ ಸ್ವಹಿತಾಸಕ್ತಿಯನ್ನು ತ್ಯಾಗಮಾಡುವದು ನೈತಿಕವಾದದು ಹಾಗೂ ಸರ್ವೋತ್ಕೃಷ್ಟವಾದುದು. ಆ ಎತ್ತರಕ್ಕೆ ಏರಿದ ೨೦ ನೇ ಶತಮಾನದ ಇಬ್ಬರು ಮಹಾನ ವ್ಯಕ್ತಿಗಳೆಂದರೆ ಮಹಾತ್ಮ ಗಾಂಧೀಜಿ ಹಾಗು ಶ್ರೇಷ್ಠ ವಿಜ್ಞಾನಿಯಾದ ಆಲ್ಬರ್ಟ್ ಐನ್‌ಸ್ಟೀನ್. ಶತ್ರುವಿನಲ್ಲೂ ಮಿತ್ರತ್ವ ಕಂಡು ಮನುಕುಲವನ್ನು ತಲ ತಾರತಮ್ಯ ಭಾವಗಳಿಂದಲೂ ಮುಕ್ತವಾಗಿ ಒಂದೆಂದು ಪರಿಗಣಿಸಿದ ಗಾಂಧೀಜಿ ಬದುಕಿನ ಸಾರ್ಥಕತೆಯನ್ನು ಕಂಡ ಮಹಾತ್ಮನಾದರೇ, ಸಮಷ್ಟಿಯ ನಾಶಕ್ಕಾಗಿ ಅಣುಬಾಂಬನ್ನು ತಯಾರಿಸು ಎಂದು ಅಂದಿನ ಅಮೇರಿಕಾ ಅಧ್ಯಕ್ಷನಿಗೇ ಅದು ಸಾಧ್ಯವಿಲ್ಲ; ಏಕೆಂದರೆ ಅಣುಶಕ್ತಿ ಎಂಬುದು ಮನುಕುಲದ ನಾಶಕ್ಕಲ್ಲ, ನಿರ್ಮಾಣಕ್ಕೆ ಎಂದು ಎದೆ ಎತ್ತಿ ನಿರ್ಭೀತಿಯಿಂದ ಹೇಳಿದ ಐನ್‌ಸ್ಟೀನ್ ಮಾನವೀಯತೆಯ ಮೇರು ಶಿಖರವಾಗಿದ್ದಾರೆ.

ಒಟ್ಟಿನಲ್ಲಿ ಪರೋಪಕಾರಂ ಇದ್ದಂ ಶರೀರಂ ಎನ್ನುವ ಮಹತ್ವದ ಮಾತೊಂದಿದೆ. ಆ ಮಾತಿನಂತೆ ತಮ್ಮ ಹೃನ್ಮನಗಳನ್ನು ತೆರೆಯುವುದು ಸಮಷ್ಟಿಯ ಹಿತ ದೃಷ್ಟಿಯಿಂದ ಸಾಧುವಾದುದು. ಪ್ರಕೃತಿಯ ಸಮಸ್ತವೂ ಈ ಪರೋಪಕಾರದ ತಪಸ್ಸಿನಲ್ಲಿ ಮಗ್ನವಾಗಿದೆ. ನಾವು ನಿಸರ್ಗದಿಂದ ಕಲಿಯಬೇಕಾದ ಮೊದಲ ಪಾಠವೆಂದರೆ ಇದೇ, ಪರಾರ್ಥವೇ ಪುಣ್ಯ ಎಂಬುದು.

ಪ್ರೊ॥ ಕೆ.ಶ್ರೀನಿವಾಸನ್; ಒಂದು ಮಧುರ ನೆನಪು

–ಸುರೇಂದ್ರ ಕೌಲಗಿ

ಹತ್ತಿರವಿದ್ದೂ ದೂರದಂತಾಗುವ, ದೂರವಿದ್ದರೂ ಹತ್ತಿರದಂತಾಗುವ ವಿಶಿಷ್ಟ ವ್ಯಕ್ತಿತ್ವದ ವ್ಯಕ್ತಿ ಪ್ರೊ॥ ಕೆ ಶ್ರೀನಿವಾಸನ್. ಮೈಸೂರಿನ ಅವರ ಮನೆಯಲ್ಲಿ ದೇಶದ ಪ್ರಚಲಿತ ವಿದ್ಯಮಾನಗಳ ಬಗ್ಗೆ ಆಗ್ಗಾಗ್ಗೆ ಅವರೊಂದಿಗೆ ಚರ್ಚಿಸುವಾಗ ಅವರ ಈ ವಿಶಿಷ್ಟ ವ್ಯಕ್ತಿತ್ವದ ಪರಿಚಯ ನನಗಾದುದರಿಂದಲೇ ಅವರನ್ನು ಏಕಕಾಲದಲ್ಲಿ ಹತ್ತಿರ ಮತ್ತು ದೂರದ ವ್ಯಕ್ತಿ ಎಂದು ಬಣ್ಣಿಸಿರುವುದು ಎಡಪಂಥೀಯ ವಿಚಾರಧಾರೆಯಿಂದ ಮತ್ತು ಎಮ್.ಎನ್ ರಾಯ್ ರವರ ವಿಚಾರಧಾರೆಯಿಂದ ಪ್ರಭಾವಿತರಾಗಿದ್ದರಿಂದಲೋ ಏನೋ ಅನೇಕ ಸಲ ಗಾಂಧೀಯವರ ನಿಲುವುಗಳನ್ನು ಖಂಡಿಸುತ್ತಿದ್ದರು. ಗಾಂಧಿವಿಚಾರದಲ್ಲಿ ಒಂದು ಪ್ರಕಾರದ ಅಭಿಮಾನ ಉಳ್ಳಂಥವರಿಗೆ ಅದು ಆಘಾತವನ್ನು ಉಂಟುಮಾಡುತ್ತಿತ್ತು. ಅವರ ಟೀಕೆ ಎಷ್ಟು ತೀಕ್ಷ್ಣವಾಗಿರತಿತ್ತು ಎಂದರೆ ಅದನ್ನು ಸಮಾನ್ಯವಾದ ಪ್ರತ್ಯುತ್ತರದಿಂದ ನಿರಾಕರಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಕೆಲವೊಂದು ಸಲ ಸರ್ಕಾರದ ರೀತಿ – ನೀತಿಗಳು ಯಾವ ರೀತಿ. ಗಾಂಧೀವಿಚಾರಕ್ಕೆ ತದ್ವಿರುದ್ಧವಾಗಿವೆ ಎಂಬುದನ್ನು ಅಷ್ಟೇ ಬಲವಾಗಿ ಅವರು ತಮ್ಮ ವಿಚಾರವನ್ನು ಹೇಳುತ್ತಿದ್ದರು. ಹೀಗೆ ಗಾಂಧೀಪರವಿಚಾರ ಮಾತನಾಡಿದಾಗ ಪ್ರೊ॥ ಶ್ರೀನಿವಾಸ್ ಹತ್ತಿರದವರಾಗಿ ಇರುವಂತೆ ಅನಿಸುತ್ತಿತ್ತು, ಗಾಂಧೀವಿಚಾರವನ್ನು ಖಂಡಿಸಿದಾಗ ದೂರದ ವ್ಯಕ್ತಿಯಾಗಿ ಅನಿಸುತ್ತಿದ್ದರು.

ನನಗೂ ಅವರಿಗೂ ವಯಸ್ಸಿನಲ್ಲಿ – ಐದು ವರ್ಷಗಳಷ್ಟಾದರೂ ವ್ಯತ್ಯಾಸವಿತ್ತು. ಮಹಾತ್ಮ ಗಾಂಧೀಜಿ ೧೯೩೪ರಲ್ಲಿ ಮೈಸೂರಿಗೆ ಬಂದಿದ್ದಾಗ ಶ್ರೀನಿವಾಸನ್ ರವರು ಗಾಂಧೀ ಅವರನ್ನು ಬಹು ಹತ್ತಿರದಿಂದ ನೋಡಿದ್ದರು. ಅಂಥ ಸದಾವಕಾಶ ನನಗೆ ದೊರೆತಿರಲಿಲ್ಲ. ಮೊದಲಬಾರಿಗೆ ಗಾಂಧೀ ಅವರನ್ನು ನೋಡಿದ ಸಂದರ್ಭವನ್ನು ಅವರು ವರ್ಣಿಸುತ್ತಿದ್ದಾಗ ನಾನು ರೋಮಾಂಚನಗೊಳ್ಳುತ್ತಿದ್ದೆ. ಶ್ರೀನಿವಾಸನ್‌ರವರು ರಸಾಯನಶಾಸ್ತ್ರದ ವಿಜ್ಞಾನಿಯಾಗಿದ್ದರು. ಜೆ. ಲಕ್ಷ್ಮಣ್ ರಾವ್‌ರಂಥ ವಿಜ್ಞಾನ ಕ್ಷೇತ್ರದ ವ್ಯಕ್ತಿಗಳೊಂದಿಗೆ ನಿಕಟಸಂಪರ್ಕವಿರಿಸಿಕೊಂಡಿದ್ದರು. ಅವರು ಇತ್ತೀಚೆಗೆ ಪ್ರಕಟವಾಗಿರುವ ಆರ್ಥಿಕ–ರಾಜಕೀಯ ಪುಸ್ತಕಗಳನ್ನು ಓದುತ್ತಿದ್ದರಿಂದ ಅವರ ವರ್ತಮಾನ ಪರಿಸ್ಥಿತಿಯ ಜ್ಞಾನ ಕರಾರುವಕ್ಕಾಗಿರುತ್ತಿತ್ತು. ಅವರು ತತ್ವಜ್ಞಾನದಲ್ಲಿಯೂ ಆಸಕ್ತಿ ಉಳ್ಳವರಾಗಿದ್ದರಿಂದ ಅವರ ವಿಚಾರಗಳ ಮಂಡನೆಯಲ್ಲಿ ತೂಕವಿರುತ್ತಿತ್ತು. ಈ ಎಲ್ಲ ಕಾರಣಗಳಿಂದ

ಅವರೊಂದಿಗೆ ನಾನು ಆಳವಾಗಿ ಚರ್ಚಿಸುವ ಗೋಜಿಗೆ ಹೋಗುತ್ತಿರಲಿಲ್ಲ. ನನಗೆ ಹೊಸ ಹೊಸ ವಿಚಾರಗಳನ್ನು ಮತ್ತು ಹೊಸವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ತೀರ್ವ ಇಚ್ಚೆ ಇರುತ್ತಿದ್ದುದರಿಂದ ಶ್ರೀನಿವಾಸನ್‌ರವರ ಮುಂದೆ ಯಾವುದಾದರೊಂದು ಪ್ರಚಲಿತ ವಿಷಯವನ್ನು ಪ್ರಸ್ತಾಪಿಸಿ ಅವರಿಂದ ಹೊರಹೊಮ್ಮುವ ಪ್ರತಿಕ್ರಿಯೆಗಳ ಮೂಲಕ ಅವರಿಗೆ ಗೊತ್ತಿಲ್ಲದಂತೆಯೇ ಜ್ಞಾನಸಂಪಾದನೆ ಮಾಡಿಕೊಳ್ಳುತ್ತಿದ್ದೆ, ಆನಂದಿಸುತ್ತಿದ್ದೆ ಅವರಿಂದ ಈ ಪ್ರಕಾರವಾಗಿ ತಿಳಿದ ಅನೇಕ ವಿಷಯಗಳು ನನಗೆ ಪ್ರಯೋಜನಕಾರಿಯಾಗುತ್ತಿದ್ದವು. ಕೆಲವೊಂದು ಸಲ ಅವರ ಪುಸ್ತಕಗಳ ಸಂಗ್ರದಲ್ಲಿದ್ದ ನನ್ನ ಆಸಕ್ತಿಯ ಪುಸ್ತಕವನ್ನು ಅವರಿಂದ ಎರವಲಾಗಿ ಪಡೆಯುತ್ತಿದ್ದೆ. ಅವರು ಅದನ್ನು ಸಂತೋಷವಾಗಿ ಕೊಡುತ್ತಿದ್ದರು. ಈ ಎಲ್ಲ ಕಾರಣಗಳಿಂದಾಗಿ ನಾನು ಅವರನ್ನು ನನ್ನ ಗುರುಸ್ಥಾನದಲ್ಲಿ ಇರಿಸಿಕೊಂಡಿದ್ದೇನೆ. ನೇರವಾಗಿ ಅವರ ವಿದ್ಯಾರ್ಥಿಯಾಗಿರದಿದ್ದರೂ ಅವರ ಮನೆಯಲ್ಲಿ ಸಹಜವಾಗಿ ಮಾತನಾಡುತ್ತಾ, ಕಾಫಿ ಕುಡಿಯುತ್ತ, ಸಹಭೋಜನ ಮಾಡುತ್ತ ಪರೋಕ್ಷವಾಗಿ ಅವರ ವಿದ್ಯಾರ್ಥಿಯಾಗಿದ್ದೆ. ಶ್ರೀನಿವಾಸನ್‌ರವರೊಂದಿಗಿನ ವೈಚಾರಿಕ ಸಂಬಂಧವಲ್ಲದೆ ಗಾಂಧೀವಿಚಾರದ ಕಾರ್ಯಕ್ರಮಗಳಲ್ಲಿ ಕೂಡ ಭಾಗಿಯಾಗುವ ಅವಕಾಶ ನನಗೆ ದೊರಕಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿಯ ಗಾಂಧೀಭವನ ನಡೆಸುತ್ತಿದ್ದ ಗಾಂಧೀ ಅಧ್ಯಯನ ಡಿಪ್ಲೋಮೊ ಕೋರ್ಸಿಗೆ ಪಠ್ಯವನ್ನು ತಯಾರಿಸುವ ಕಾರ್ಯದಲ್ಲಿ ಪ್ರೊ॥ ಶ್ರೀನಿವಾಸನ್ ಮತ್ತು ಪ್ರೊ॥ ಬಿ. ಆರ್ ಪ್ರಾಣೇಶ್‌ರಾದ ತಮ್ಮನ್ನು ತೊಡಗಿಸಿಕೊಂಡಿದ್ದರು. ಆಗ ಕೆಲಬಾರಿ ವಿಚಾರಗಳು ಪ್ರಸ್ತಾಪಕ್ಕೆ ಬಂದಾಗ ನನ್ನದೂ ಒಂದುಚೂರು ಪಾತ್ರವಿರುತ್ತಿತ್ತೆಂದು ಹೇಳಲು ಹೆಮ್ಮೆ ಅನಿಸುತ್ತದೆ. ಅಲ್ಲದೆ ಗಾಂಧೀಭವನದಲ್ಲಿ ಆಗಾಗ್ಗೆ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ಅವರಿಬ್ಬರೊಂದಿಗೆ ಭಾಗವಹಿಸುವ ಅವಕಾಶವೂ ದೊರೆಯುತ್ತಿತ್ತು. ಅವರಿಬ್ಬರ ಭಾಷಣಗಳನ್ನು ಕೇಳುವ ಅವಕಾಶ ದೊರೆಯುತ್ತಿತ್ತು. ಪ್ರತಿ ವರ್ಷ ಪಶ್ಚಿಮವಾಹಿನಿಯಲ್ಲಿ ನಡೆಯುವ ಸರ್ವೋದಯ ಮೇಳದಲ್ಲಿ ನಾವು ಭೇಟಿಯಾಗುತ್ತಿದ್ದೆವು. ಮೇಳದ ಸಂದರ್ಭದಲ್ಲಿ ಚರ್ಚಿಸಬಹುದಾದ ವಿಷಯಗಳ ಬಗ್ಗೆ ಪ್ರೊ॥ ರವರು ಸಲಹೆ ಕೊಡುತ್ತಿದ್ದರು. ಕೆಲವೊಂದು ಸಲ ಸ್ವತಃ ಸಕ್ರಿಯವಾಗಿಯೂ ಭಾಗವಹಿಸುತ್ತಿದ್ದರು.

ಪ್ರೊ॥ ಶ್ರೀನಿವಾಸನ್ ಮತ್ತು ಪ್ರೊ॥ ಬಿ.ಆರ್ ಪ್ರಾಣೇಶ್‌ರಾವ್ ಇನ್ನೊಂದು ಮಹತ್ವದ ಕೆಲಸದಲ್ಲಿ ತೊಡಗಿಕೊಂಡಿದ್ದರು. ಆ ಕೆಲಸದ ಬಗ್ಗೆ ಶ್ರೀನಿವಾಸನ್ ರವರು ಆಗಾಗ್ಗೆ ಅಭಿಮಾನದಿಂದ ಪ್ರಸ್ತಾಪಿಸುತ್ತಿದ್ದುದ್ದು ಉಂಟು. ಆ ಕಾರ್ಯಕ್ರಮ ಒಂಟಿಕೊಪ್ಪಲಿನಲ್ಲಿರುವ ಕುಕ್ಕರಹಳ್ಳಿ ಸರ್ಕಾರಿ ಶಾಲಾ ಮಕ್ಕಳ ಸರ್ವತೋಮುಖ ಅಭಿವೃದ್ಧಿಯ ಚಿಂತನೆ. ಆ ಶಾಲೆಗೆ ಬರುವ ಮಕ್ಕಳಲ್ಲಿ ಬಹುಸಂಖ್ಯಾತ ಮಕ್ಕಳು

ಹಿಂದುಳಿದ ಜನಸಮುದಾಯದವರಾಗಿದ್ದರು. ಆ ಶಾಲೆಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯೂ ಇತ್ತು. ಸಾಂಸ್ಕೃತಿಕ ಮತ್ತು ವೈಚಾರಿಕ ಕಾರ್ಯಕ್ರಮಗಳ ಅಭಾವವೂ ಇತ್ತು. ಈ ಎಲ್ಲ ಕೊರತೆಗಳನ್ನು ದೂರಮಾಡಿ ಆ ಶಾಲೆಯ ಮಕ್ಕಳು ಒಳ್ಳೆಯ ಪರಿಸರದಲ್ಲಿ ಓದುವಂತೆ ಮಾಡಬೇಕೆಂಬುದು ಅವರಿಬ್ಬರ ಅಹರ್ನಿಶಿ ಪ್ರಯತ್ನವಾಗಿತ್ತು. ಅವರು ಆಗಾಗ್ಗೆ ಏರ್ಪಡಿಸುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆ ಶಾಲಾಮಕ್ಕಳು ಭಾಗವಹಿಸಿ ತಮ್ಮ ಪ್ರತಿಭೆಯನ್ನು ತೋರಿಸುತ್ತಿದ್ದನ್ನು ಬಹಳ ಹೆಗ್ಗಳಿಕೆಯಿಂದ ಹೇಳುತ್ತಿದ್ದರು. ಮಕ್ಕಳ ಆ ಸಾಧನೆಗಳಿಂದ ಅವರಿಬ್ಬರ ಆತ್ಮತೃಪ್ತಿ ಆಗುತ್ತಿತ್ತೆಬುಂದು ಅವರ ಮುಖಭಾವಗಳಿಂದ ಗೊತ್ತಾಗುತ್ತಿತ್ತು.

ಗಾಂಧೀ ಅಧ್ಯಯನ ಸಂಸ್ಥೆಯೊಂದನ್ನು ಪ್ರೊ॥ ಪ್ರಾಣೇಶ್‌ರಾವ್ ಮತ್ತು ಶ್ರೀನಿವಾಸನ್ ಹುಟ್ಟುಹಾಕಿದ್ದರು. ಅದರ ಮೂಲಕ ಕೆಲವು ಕಾರ್ಯಕ್ರಮ ನಡೆಸಲು ಪ್ರಯತ್ನ ಪಡುತ್ತಿದ್ದರು.

ಪ್ರೊ॥ ಶ್ರೀನಿವಾಸನ್‌ರವರ ಚಿಂತನೆ ಮತ್ತು ಕ್ರೀಯೆ ಯಾವಾಗಲೂ ಸಮಾಜಮುಖಿಯಾಗಿರುತ್ತಿತ್ತು. ರಾಜ್ಯದಲ್ಲಾಗಲೀ, ರಾಷ್ಟ್ರದಲ್ಲಾಗಲೀ ದುರ್ಘಟನೆ ಸಂಭವಿಸಿದಲ್ಲಿ ಅವರು ಆ ಬಗ್ಗೆ ತಮ್ಮದೇ ಆದ ಸ್ಪಷ್ಟ ನಿಲುವು ಹೊಂದಿರುತ್ತಿದ್ದರು ಮತ್ತು ಅದನ್ನು ಸಂಭಾಷಣೆಯಲ್ಲಿ ತೊಡಗಿದ್ದಾಗ ವ್ಯಕ್ತಪಡಿಸುತ್ತಿದ್ದರು. ತಮಿಳುನಾಡಿನಲ್ಲಿ ಸುನಾಮಿ ಅಲೆಗಳಿಂದ ಉಂಟಾದ ಭೀಕರ ಪ್ರಾಕೃತಿಕ ವಿಕೋಪದಿಂದ ಬಹಳಷ್ಟು ಪ್ರಾಣಹಾನಿ ಮತ್ತು ಆಸ್ತಿ-ಪಾಸ್ತಿಗಳ ಹಾನಿ ಉಂಟಾದಾಗ ಅಲ್ಲಿಯ ಜನಕ್ಕೆ ಸಹಾಯ ಮಾಡಲು ಮೈಸೂರು ಸರಸ್ವತಿಪುರಂಲ್ಲಿ ಪಾದಯಾತ್ರೆ ಮಾಡಿ ಧನ ಸಂಗ್ರಹಸಿದರು. ಧನ ಸಂಗ್ರಹಿಸಿ ಸಂಬಂಧಿಸಿದವರ ಮೂಲಕ ತಲುಪಿಸಿದರು. ಬಿಳಿಗಿರಿಬೆಟ್ಟದಲ್ಲಿ ಗಾಂಧೀ ಸ್ಮಾರಕ ನಿಧಿಯ ಕಾರ್ಯಕರ್ತರಾಗಿ ಕೆಲಸ ಮಾಡಿದ್ದ ಮತ್ತು ಮೈಸೂರು ನಗರದಲ್ಲಿ ವೃದ್ಧಾಶ್ರಮ ನಡೆಸುತ್ತಿದ್ದ ಶ್ರೀಸೀತಾರಾಮ್ ಅಯ್ಯಂಗಾರ್ ಜೊತೆಗೂಡಿ ಅನೇಕ ಶಿಕ್ಷಣ ಸಂಸ್ಥೆಗಳಿಗೆ ಭೇಟಿಕೊಟ್ಟು ಮಕ್ಕಳಿಗೆ ಗಾಂಧೀವಿಚಾರ ಹೇಳುತ್ತಿದ್ದರು. ಆಗಾಗ್ಗೆ ತಮ್ಮ ವಿಚಾರಗಳನ್ನು ಕ್ರೋಢಿಕರಿಸಿ ಪ್ರಸ್ತುತ ಪರಿಸ್ಥಿತಿಗೆ ಅನುಕೂಲವಾಗುವಂತೆ ಪುಸ್ತಕ ಬರೆಯುತ್ತಿದ್ದರು. ಅವರು ಬರೆದಂಥ ಕೆಲವು ಪುಸ್ತಕಗಳು ಇಂತಿವೆ;

೧. ವೈಜ್ಞಾನಿಕತೆ ಮತ್ತು ತಾಂತ್ರಿಕತೆ ಒಂದು ತಾತ್ವಿಕ ವಿವೇಚನೆ,
೨. ಏಳು ಖ್ಯಾತ ವಿಜ್ಞಾನಿಗಳ ಜೀವನ ಚರಿತ್ರೆ ಸಾಧನೆ ಮತ್ತು
ಚಿಂತನೆ ವಿಚಾರ.

ಪುಸ್ತಕಗಳನ್ನದೆ ಅನೇಕ ಲೇಖನಗಳನ್ನು ಬರೆದಿದ್ದಾರ ಅಲ್ಲದೆ ಅವರ ಆತ್ಮೀಯ ಮಿತ್ರರೂ ಮತ್ತು ಗಾಂಧೀವಿಚಾರದ ಸಹಪಥಿಕರೂ ಆಗಿದ್ದ ಪ್ರೊ॥ ಬಿ.ಆರ್.ಪ್ರಾಣೇಶ್‌ರಾವ್‌ರವರಿಗೆ ಎಂಭತ್ತು ವರ್ಷಗಳಾದಾಗ ಅವರನ್ನು ಕುರಿತು

ಒಂದು ಉತ್ತಮವಾದ ಸದ್ಭಾವನಾ ಗ್ರಂಥವನ್ನು ಹೊರತಂದರು.

ಪ್ರೊ॥ ಶ್ರೀನಿವಾಸನ್‌ರವರ ಎಲ್ಲ ಕಾರ್ಯ ಚಟುವಟಿಕೆಗಳಲ್ಲಿ ಬೆಂಬಲಿಗರಾಗಿ ನಿಂತಿದ್ದವರು ಅವರ ಶ್ರೀಮತಿ ಸುಬ್ಬಲಕ್ಷ್ಮೀಯವರು ಮನೆಗೆ ಬಂದ ಎಲ್ಲ ಅತಿಥಿಗಳಿಗೆ ಸತ್ಕಾರ ಮಾಡುವುದು ಅವರ ಹೊಣೆಯಾಗಿರುತ್ತಿತ್ತು. ಕೆಲವೊಂದು ಸಲ ವಿವಿಧ ಸಂಸ್ಥೆಗಳ ಸಮಿತಿಯ ಸಭೆಗಳು ಅವರ ಮನೆಯಲ್ಲಿ ನಡೆಯುತ್ತಿದ್ದವು. ಆಗ ಶ್ರೀಮತಿ ಶ್ರೀನಿವಾಸನ್‌ರವರು ಉತ್ಸಾಹದಿಂದ ಅತಿಥಿ ಸೇವೆ ಮಾಡುತ್ತಿದ್ದರು. ಪ್ರೊ॥ ಶ್ರೀನಿವಾಸನ್‌ರವರ ಮನೆ ವಿವಿಧ ವಿಚಾರಗಳ ವ್ಯಕ್ತಿಗಳು ಉದ್ದೇಶ ಪೂರ್ವಕವಾಗಿ ಇಲ್ಲವೇ ಆಕಸ್ಮಿಕವಾಗಿ ಭೇಟಿಯಾಗುವ ತಾಣವಾಗಿತ್ತು. ಅವರು ಮೈಸೂರು ಬಿಟ್ಟು ಬೆಂಗಳೂರಿಗೆ ಹೋದ ಮೇಲೆ ಇಡೀ ಮೈಸೂರು ನಗರವೇ ಶೂನ್ಯವತ್ತಾಗಿರುವಂತೆ ಭಾಸವಾಗುತ್ತಿತ್ತು. ಮೈಸೂರು ನಗರದಲ್ಲಿಯ ಚಿಂತಕರ, ಸಮಾಜ ಜೀವಿಗಳ, ಕಾರ್ಯಕರ್ತರ ಮತ್ತು ಶಿಕ್ಷಕರ ಜೀವನದಲ್ಲಿ ತುಂಬಲಾರದ ನಷ್ಟ ಉಂಟಾಯಿತು.

ಅವರು ಮೈಸೂರು ಬಿಟ್ಟು ಖಾಯಂ ಆಗಿ ಬೆಂಗಳೂರಿಗೆ ಹೋಗುವ ನಿಶ್ಚಯಮಾಡಿದ್ದನ್ನು ತಿಳಿದು ಅವರ ಎಲ್ಲ ಅಭಿಮಾನಿ ಸ್ನೇಹಿತರಿಗೆ ಬಹಳ ಬೇಸರವಾಯಿತು, ಅವರಿಗೆ ಬೆಂಗಳೂರು ಒಗ್ಗುವುದಿಲ್ಲವಾದ್ದರಿಂದ ಸ್ವಲ್ಪ ಸಮಯದಲ್ಲಿಯೇ ಮೈಸೂರಿಗೆ ಹಿಂದಿರುಗುತ್ತಾರೆಂಬ ಅನಿಸಿಕೆ ಬಲವಾಗಿತ್ತು. ಆದರೆ, ಅಯ್ಯೋ, ಹಾಗಾಗಲಿಲ್ಲ.

ಡಾ॥ ಬಿ.ಆರ್.ಅಂಬೇಡ್ಕರರ ೧೨೫ನೇ ಜನ್ಮ ದಿನೋತ್ಸವದ ಸಂದರ್ಭದಲ್ಲಿ ನಾನು ಪೂಣಾ ಒಂಪ್ಪಂದ ಕುರಿತು ಪ್ಯಾರೆಲಾಲರವರು ಬರೆದಿರುವ "ಮಹಾಉಪವಾಸ" (The Epic Fast) ಎಂಬ ಪುಸ್ತಕವನ್ನು ಓದುತ್ತಿದ್ದೆ ಆ ಒಪ್ಪಂದದಲ್ಲಿಯ ಕೆಲ ಒಳಾರ್ಥಗಳು ಮತ್ತು ಆ ಒಪ್ಪಂದದಿಂದ ಆಗುವ ದೂರಗ್ರಾಮಿ ಪರಿಣಾಮಗಳ ಬಗ್ಗೆ ನನ್ನ ಮನಸ್ಸಿನಲ್ಲಿ ಅನೇಕ ಸಂಶಯಗಳು ಮೂಡುತ್ತಿದ್ದವು. ಆಗ ಪ್ರೊ॥ ಶ್ರೀನಿವಾಸನ್‌ರ ನೆನಪು ಬಹಳ ಕಾಡಿತು. ಅವರು ಮೈಸೂರಲ್ಲಿ ಇದ್ದಿದ್ದರೆ ಅವರೊಂದಿಗೆ ಪೂಣಾ ಒಪ್ಪಂದದ ಬಗೆಗಿನ ನನ್ನ ಮನಸ್ಸಿನಲ್ಲಿಯ ಗೊಂದಲವನ್ನು ನಿವಾರಿಸಿಕೊಳ್ಳಬಹುದಾಗಿತ್ತಲ್ಲ ಎಂದು ಅನಿಸಿತು. ಈ ರೀತಿಯ ಅನಿಸಿಕೆಗಳು ನನಗೆ ಬೇರೆ-ಬೇರೆ ಸಂದರ್ಭಗಳಲ್ಲಿಯ ವಿಷಯಗಳ ಬಗೆಗೂ ಅನಿಸುತ್ತಿರುತ್ತದೆ. ಅವರು ಬೆಂಗಳೂರಿಗೆ ನಿರ್ಗಮಿಸಿದ ನಂತರ ಒಂದಸಲವೂ ಬೆಂಗಳೂರಿಗೆ ಹೋಗಿ ಅವರನ್ನು ಭೇಟಿ ಮಾಡಲಾಗಲ್ಲಿಲ್ಲವಲ್ಲ ಎಂಬ ಕೊರಗು ಸದಾ ಕಾಡುತ್ತಲೇ ಇರುತ್ತದೆ. ಶ್ರೀನಿವಾಸನ್ನರವರು ಬೆಂಗಳೂರಿಗೆ ಹೋದ ಸ್ವಲ್ಪ ಸಮಯದಲ್ಲಿ ನನಗೆ ರಕ್ತದ ಒತ್ತಡ ಹೆಚ್ಚಾಗಿ ನಾನು ಶಾರೀರಿಕವಾಗಿ ದುರ್ಬಲಗೊಂಡಿದ್ದೂ ಅವರ ಭೇಟಿ ತಪ್ಪುವುದಕ್ಕೆ ಒಂದು ಕಾರಣವಾಯಿತು.

ಸಹೋದರಿ ರಾಜೇಶ್ವರಿ ತೇಜಸ್ವಿಯವರೊಂದಿಗೆ ಮೂವತ್ತು ರಸನಿಮಿಷಗಳು

-ಸುರೇಂದ್ರ ಕೌಲಗಿ

ಆಗದೇ ಇದ್ದುದು ಆದಾಗ ವಿಶೇಷ ಸಂತೋಷವಾಗುತ್ತದೆ. ಅಂಥ ಸಂದರ್ಭದಲ್ಲಿ ಆತ್ಮೀಯತೆ ಇದ್ದಲ್ಲಿ ಆ ನಿಮಿಷಗಳು ಸ್ಮರಣೀಯವಗಿರುತ್ತವೆ ಮತ್ತು ಬೇರೆಯವರೊಂದಿಗೆ ಹಂಚಿಕೊಳ್ಳಬೇಕೆಂಬ ಒತ್ತಾಸೆಯು ಉಂಟಾಗುತ್ತದೆ. ಅಂಥ ಒಂದು ಸುಸಂದರ್ಭ ತುಂಬ ಇತ್ತೀಚೆಗೆ ದೊರೆಯಿತು. ಮೊಮ್ಮಗ ಸುಮನಸ್ ಸಂಶೋಧನಾ ವಿದ್ಯಾರ್ಥಿಯಾಗಿ ಇಂಗ್ಲೆಂಡಿಗೆ ಹೋಗುವ ಸಮಯ ಬಂದಾಗ ಅವನ ಇಚ್ಛೆಯಂತೆ ನಾವೆಲ್ಲ ಕುಟುಂಬದ ಸದಸ್ಯರು ಪ್ರಕೃತಿಯ ಮಧ್ಯದಲ್ಲಿರುವ ಶೃಗೇರಿಯ ಶಾರದಾದೇವಿ ದರ್ಶನಕ್ಕಾಗಿ ಹೊರಟೆವು. ಮಲೆನಾಡಿನ ಸುತ್ತಿ ಬಳಸಿ ಸಾಗುವ ರಸ್ತೆಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಕೆಲ ಸಮಯದ ನಂತರ ಮೂಡಿಗೆರೆ ಹ್ಯಾಂಡ್‌ಪೋಸ್ಟ್ ಎಂಬ ಸ್ಥಳ ಬಂದಿತು. ಆ ಮಾರ್ಗದಲ್ಲಿ ಹೋಗುತ್ತೇವೆಂಬುದು ನನಗೆ ಮೊದಲು ಗೊತ್ತಿರಲಿಲ್ಲ. ಇದ್ದಕ್ಕಿದ್ದಹಾಗೆ ಮೂಡಿಗೆರೆ ಹ್ಯಾಂಡ್‌ಪೋಸ್ಟ ಎಂಬ ಕೈಮರ ಕಂಡ ತಕ್ಷಣ ಒಮ್ಮಲೆ ನಿದ್ರೆಯಿಂದ ಹೊರ ಬಂದವನಂತಾದೆ. "ಇದೆ ಅಲ್ಲವೆ, ಪೂರ್ಣಚಂದ್ರ ತೇಜಸ್ವಿಯವರ ಜನಪ್ರಿಯ ವಿಳಾಸ" ಎಂದು ಹೊಳೆಯಿತು. ಆಗ ಆ ಬಗ್ಗೆ ನನ್ನ ಮಗ ಸಂತೋಷನನ್ನು ವಿಚಾರಿಸಿದಾಗ ಇಲ್ಲೆ ಹತ್ತಿರದಲ್ಲಿಯೆ ತೇಜಸ್ವಿಯವರ ಕಾರ್ಯಕ್ಷೇತ್ರವಾಗಿದ್ದ, ಅಪೂರ್ವ ಸಾಹಿತ್ಯ ರಚನೆಯಾಗಿದ್ದ ತೋಟವಿದೆ ಎಂದು ಹೇಳಿದಾಗ ನನಗೆ ಅಲ್ಲಿ ಹೋಗಿ ನೋಡುವ ಇಚ್ಛೆಯಾಯಿತು. ಆ ತೋಟದಲ್ಲಿ ಈ ಸಮಯದಲ್ಲಿ ಯಾರೂ ಇರಲಾರರೆಂಬ ಮಾತನ್ನು ಸಂತೋಷ್ ಹೇಳಿದರೂ ಸಾಹಿತ್ಯಿಕ ಮತ್ತು ಕ್ರಿಯಾಶೀಲತೆಗೆ ಸ್ಫೂರ್ತಿ ಕೊಟ್ಟಂಥ ತೇಜಸ್ವಿಯವರ ತೋಟವನ್ನು ಕಣ್ಣಾರೆಯಾದರೂ ನೋಡಬೇಕೆಂದು ಬಯಸಿ ಮುಂದೆ ಸ್ವಲ್ಪ ದೂರ ಹೋಗಿದ್ದ ಕಾರನ್ನು ಹಿಂದಿರುಗಿಸಿ ತೇಜಸ್ವಿಯವರ ತೋಟದ ಸ್ಥಳವನ್ನು ವಿಚಾರಿಸುತ್ತ ಅಲ್ಲಿಗೆ ಹೋದೆವು. ತೋಟದ ಮುಂದಿನ ಗೇಟನ್ನು ತೆಗೆದು ಏಕಾಂತವೆನಿಸುವ ತೋಟದೊಳಕ್ಕೆ ಹೋಗಿ ತೇಜಸ್ವಿಯವರ ಮನೆ ಮುಂದೆ ಕಾರನ್ನು ನಿಲ್ಲಿಸಿದೆವು. ಮಕ್ಕಳು ಇಳಿದುಹೋಗಿ ಮನೆಯಲ್ಲಿ ಯಾರಾದರೂ ಇದ್ದಾರೆಯೆ ಎಂದು ನೋಡಿಕೊಂಡುಬರಲು ಹೋದರು. ನಮ್ಮೆಲ್ಲರ ಆನಂದಾಶ್ಚರ್ಯಕ್ಕೆ ರಾಜೇಶ್ವರಿಯವರು ಇರುವುದು ಗೊತ್ತಾಯಿತು. ವಿಷಯ

ತಿಳಿದಕೂಡಲೆ ರಾಜೇಶ್ವರಿಯವರು ಮನೆಯ ಹೊರಗೆ ಹಸನ್ಮುಖದೊಂದಿಗೆ ಹೊರಬಂದು ನಮಸ್ಕರಿಸುತ್ತಾ ನಮ್ಮೆಲ್ಲರನ್ನು ಸ್ವಾಗತಿಸಿದರು. ಕಾರ ಬಳಿಬಂದು ನನಗೆ ಒಳಗೆ ಬರಲು ಒತ್ತಾಯಿಸಿದರು. ತೇಜಸ್ವಿಯವರು ಓಡಾಡಿದ ಸ್ಥಳ ಮತ್ತು ಅವರು ಸಾಹಿತ್ಯ ರಚಿಸಿದ ಸ್ಥಳವನ್ನು ನೋಡಬೇಕೆಂದು ಇಚ್ಛೆಯಿಂದ ಸ್ವಲ್ಪ ಕಷ್ಟವಾದರೂ ನಡೆದುಕೊಂಡು ಮನೆಯೊಳಕ್ಕೆ ಹೋದೆ. ತೇಜಸ್ವಿಯವರು ಕುಳಿತುಕೊಳ್ಳುತ್ತಿದ್ದ ಹೊರಾಂಗಣದಲ್ಲಿಯೇ ನಾನು ಕುಳಿತುಕೊಂಡೆ. ಅಲ್ಲಿ ಇದ್ದ ಕುರ್ಚಿಯನ್ನು ನನ್ನ ಮಗ ತೋರಿಸಿ ಅದರ ಮೇಲಿಯೇ ತೇಜಸ್ವಿ ಕುಳಿತು ಬಂದಂಥ ಅತಿಥಿಗಳೊಡನೆ ಮಾತನಾಡುತ್ತಿದ್ದುದ್ದನ್ನು ಹೇಳಿದ, ನನಗೆ ಖುಷಿಯಾಯಿತು. ತೇಜಸ್ವಿಯವರು ಇದ್ದಾಗ ಅವರನ್ನು ಅವರ ಸ್ಥಳದಲ್ಲಿಯೆ ಭೇಟಿಮಾಡಲು ಸಾಧ್ಯವಾಗಿರಲಿಲ್ಲ. ಈಗ ಅವರು ದೈಹಿಕವಾಗಿ ಇಲ್ಲದಿದ್ದರೂ ಆತ್ಮಿಕವಾಗಿ ಇರುವ ಸ್ಥಳವನ್ನು ನೋಡಲು ಅವಕಾಶ ದೊರೆಯಿತಲ್ಲ ಎಂಬುದಕ್ಕೆ ವಿಶೇಷ ಖುಷಿಯಾಯಿತು. ಆ ನಂತರ ರಾಜೇಶ್ವರಿಯೊಂದಿಗೆ ತೇಜಸ್ವಿಯವರ ವೈವಿಧ್ಯಮಯ ಚಟುವಟಿಗಳ ಬಗ್ಗೆ ವಿಚಾರಿಸಲು ಪ್ರಾರಂಭಿಸಿದೆ. ರಾಜೇಶ್ವರಿಯವರು ತುಂಬಾ ಲವಲವಿಕೆಯಿಂದ, ಉತ್ಸಾಹದಿಂದ ವಿವರಣೆಯನ್ನು ಕೊಡುತ್ತಾ ಬಂದರು. ಅವರ ವಿವರಣೆಯಿಂದ ತೇಜಸ್ವಿಯವರ ಚಟುವಟಿಕೆಗಳು ಕಣ್ಣುಮುಂದೆ ಕಟ್ಟಿದಂತಾದವು. ತೋಟವೆಂದರೆ ಅದರಲ್ಲೊಂದು ಕೆರೆ ಇರಬೇಕೆಂಬ ಇಚ್ಛೆಯಿಂದ ಕೆರೆಯೊಂದನ್ನು ನಿರ್ಮಿಸಿದ್ದನ್ನು ತೋರಿಸುವುದಕ್ಕಾಗಿ ಕೆರೆಯ ಪಕ್ಕದಲ್ಲಿದ್ದ ಹೊರಾವರಣಕ್ಕೆ ಕರೆದುಕೊಂಡು ಹೋದರು. ಆ ಕೆರೆಯ ಸುತ್ತಲಿದ್ದ ಮರಗಿಡಗಳು ಶಾಂತವಾದ ವಾತಾವರಣ ನೋಡಿ ತೇಜಸ್ವಿಯವರು ಏಕೆ ಹೆಚ್ಚಾಗಿ ನಗರದಲ್ಲಿ ಏರ್ಪಡುವ ಕಾರ್ಯಕ್ರಮಗಳಿಗೆ ಹೋಗುತ್ತಿರಲಿಲ್ಲ ಎಂಬ ಕಾರಣ ಗೊತ್ತಾಯಿತು. ಈ ಮಧ್ಯೆ ಮೊಮ್ಮಕ್ಕಳು ತೇಜಸ್ವಿಯವರು ಉಪಯೋಗಿಸುತ್ತಿದ್ದ ಮತ್ತು ಅದರ ಬಗ್ಗೆ ಬಹಳಷ್ಟು ಸ್ವಾರಸ್ಯಕರವಾದ ಮಾತನ್ನು ಬರೆದಿದ್ದ ಸ್ಕೂಟರ್ ಹತ್ತಿ ಫೋಟೋ ತೆಗೆದುಕೊಂಡರು. ಕೆರೆಯ ಪಕ್ಕದ ಪ್ರಾಗಂಣದಲ್ಲಿಯೇ ರಕ್ಷಿದಿಯವರು ಇತ್ತೀಚೆಗೆ ಬರೆದಿರುವ "ನಮ್ಮೊಳಗಿನ ತೇಜಸ್ವಿ" ಎಂಬ ಪುಸ್ತಕದ ಬಿಡುಗಡೆಯನ್ನು ಇಷ್ಟರಲ್ಲಿಯೇ ಮಾಡುವವರಿದ್ದಾರೆಂದು ರಾಜೇಶ್ವರಿಯವರು ತಿಳಿಸಿದರು. ಶೋಕೇಸ್‌ನಲ್ಲಿದ್ದ ತೇಜಸ್ವಿಯವರ ಚಿತ್ರಗಳನ್ನು ನೋಡಿ ಅವರು ಕ್ರಿಯಾಶೀಲರಾಗಿದ್ದಿರಬಹುದಾದ ದಿನಗಳನ್ನು ಊಹಿಸಿಕೊಂಡೆ. ಹೀಗೆ ಸಹೋದರಿ ರಾಜೇಶ್ವರಿಯೊಂದಿಗೆ ೩೦ ನಿಮಿಷಗಳಷ್ಟು ರಸನಿಮಿಷಗಳನ್ನು ಕಳೆದೆ. ಇನ್ನೂ ದೂರ ಪಯಣಿಸಬೇಕಾದುದ್ದರಿಂದ ಹೆಚ್ಚು ಸಮಯ ಅಲ್ಲಿ ಇರಬೇಕೆಂಬ ಇಚ್ಛೆ ಇದ್ದರೂ

ಅನಿವಾರ್ಯವಾಗಿ ಹೊರಡಲೇ ಬೇಕಾಯಿತು. ಆಗದೇ ಇದ್ದುದು ಈಗ ಆದಾಗ ಉಂಟಾದ ಮಧುರ ಸ್ಮರಣೆಯೊಂದಿಗೆ ಪಯಣ ಸಾಗಿತು.

* * *

ನನ್ನ ಜೊತೆಯಲ್ಲಿ ಬಂದಿದ್ದ ಮೊಮ್ಮಗ ಸುಪ್ರಜ್ ಕೂಡ ತೇಜಸ್ವಿಯವರ ಅಭಿಮಾನಿ. ಅವನು ಈಗ ೨೦ ವರ್ಷದ ಯುವಕ. ತೇಜಸ್ವಿಯವರ ಸಾಹಿತ್ಯವನ್ನು ಓದಿದ್ದಾನೆ. ತೇಜಸ್ವಿಯವರ "ನಿರುತ್ತರಕ್ಕೆ ಭೇಟಿಕೊಟ್ಟ ಸಂದರ್ಭದಲ್ಲಿಯ ತನ್ನ ಭಾವನೆಯನ್ನು ಸಹ ಹಂಚಿಕೊಳ್ಳ ಬಯಸಿದ್ದಾನೆ. ಅವನ ಮಾತುಗಳನ್ನು ಕೆಳಗೆ ಕಾಣಿಸಿದ್ದೇನೆ.

'ತೇಜಸ್ವಿ' ಮನೆ

ಎರಡು ದಿನಗಳ ಹಿಂದೆ ಮೂಡಿಗೆರೆಯ ಮೂಲಕ ಶೃಂಗೇರಿಗೆ ಪ್ರಯಾಣ ಬೆಳೆಸಿದ್ದಾಗ ನಮ್ಮನ್ನು ಆಕರ್ಷಿಸಿದ್ದು ಕಾಂತಿಭರಿತ 'ತೇಜಸ್ವಿ ಮನೆ' ಎಂದು ಹೇಳಿದುದು ಮತ್ತಾರ ಮನೆಗೂ ಅಲ್ಲ, ನಮ್ಮ ನಿಮ್ಮೆಲ್ಲರ ಪ್ರೀತಿಯ 'ಪೂರ್ಣಚಂದ್ರ ತೇಜಸ್ವಿಯವರ ಮನೆಗೆ. ಮೂಡಿಗೆರೆಯ ಮೂಲಕ ಹಾದು ಹೋದಾಗಲೆಲ್ಲಾ ಆ ನಮ್ಮ ಪ್ರೀತಿಯ ಮನೆಗೆ ಒಮ್ಮೆ ಭೇಟಿ ನೀಡಿ ಬರುವುದು ನಮ್ಮ ವಾಡಿಕೆ. ತೇಜಸ್ವಿಯವರ ನಿಧನ ನಂತರದ ದಿನಗಳಯಲ್ಲಿಯೂ ಅದು ಅರ್ಧ ಚಂದ್ರವಾಗದೆ, ಪೂರ್ಣ ಚಂದ್ರನಂತೆಯೇ ಬೆಳದಿಂಗಳ ಬೆಳಕನ್ನು ಬೀರುತ್ತ ನಮ್ಮೆಲ್ಲರನ್ನು ಆಕರ್ಷಿಸುತ್ತದೆ! ಇದಕ್ಕೆ ಮೂಲ ಕಾರಣ ನಮ್ಮ ಪ್ರೀತಿಯ 'ರಾಜೇಶ್ವರಿ ತೇಜಸ್ವಿ'ಯವರು.

ಅವರ ಮನೆಗೆ ಹೋಗುವ ಮುನ್ನ ಒಂದು ಪುಟ್ಟ ತೋಟದ ಕಿರುದಾರಿಯಲ್ಲಿ ಸಾಗಬೇಕು. ಅ ಕಿರುದಾರಿಯಲ್ಲಿ ಸಾಗುತ್ತಿದ್ದಾಗಲೆ ನಮ್ಮೆಲ್ಲರಿಗೂ ಒಂದು ತರಹದ ಸಂತೋಷ, ಆನಂದ. ರಾಜೇಶ್ವರಿ ಅಮ್ಮ ನಾವು ಹೋದಾಗಲೆಲ್ಲ ಅತೀ ಪ್ರೀತಿಯಿಂದ, ಆನಂದದಿಂದ ನಮ್ಮೆಲ್ಲರನ್ನು ಬರಮಾಡಿಕೊಂಡು ಉಪಚರಿಸುತ್ತಾರೆ. ಹಾಗೆಯೆ ಈ ಬಾರಿಯೂ ಕೂಡ ಬಲು ಪ್ರೀತಿಯಿಂದ ನಮ್ಮನ್ನು ಬರಮಾಡಿಕೊಂಡರು. ನನ್ನ ತಾತ, ಅಪ್ಪ ರಾಜೇಶ್ವರಮ್ಮನೊಂದಿಗೆ ಮಾತನಾಡುತ್ತ ಕುಳಿತರು. ಅಣ್ಣ ಸುಮನಸ್, ತಂಗಿ ಸುಹಾಸಿನಿ ಮತ್ತು ನಾನು ಮನೆಯ ಸುತ್ತಮುತ್ತಲಿನ ಸೊಬಗನ್ನು ಸವಿಯುತ್ತ ತೇಜಸ್ವಿಯವರ ಚಿರಪರಿಚಿತ 'ಸ್ಕೂಟರ್' ಬಳಿ ಹೋದೆವು. ಆ ಸ್ಕೂಟರ್ ಬಗ್ಗೆ ನಮಗೆ ಎಲ್ಲಿಲ್ಲದ ಆಸಕ್ತಿ. ತೇಜಸ್ವಿಯವರ ಬರಹಗಳಲ್ಲಿ ಆ ಸ್ಕೂಟರ್ ಬಗ್ಗೆ ಓದಿದ್ದರಿಂದ, ಅದರ ಬಳಿ ಹೋಗಿ ಅದರ ಮೆಲೆ ಕುಳಿತು 'ಪೋಟೊ' ತೆಗೆದವು, ಅದರ ಬಳಿ ಹೋಗಿ ಫೋಟೊ ತೆಗೆಸಿಕೊಳ್ಳದೆ ಹೋದವರೇ ಇಲ್ಲ. ಈ ಬಾರಿಯೂ ಸಹ ನನ್ನ

ತಂಗಿಗೆ ಪೋಟೋ ತೆಗೆಯಲು ಹೇಳಿ ಅದರ ಮೇಲೆ ಕುಳಿತೆ. ಆಗ ಅಣ್ಣ "ಓಹೋ, ನೀನೇನು ತೇಜಸ್ವಿಯವರ ಸ್ಕೂಟರ್ ಮೇಲೆ ಕುತ್ಕೊಂಡ್ರೆ ತೇಜಸ್ವಿ ಆಗ್ಬಿಡಲ್ಲ" ಅಂದ. ನಾನೂ ತಮಾಷೆಗೆ "ಯಾರಿಗ್ಗೊತ್ತು, ಆದ್ರೂ ಆಗ್ಬಹುದು" ಅಂದೆ. ಅಷ್ಟರಲ್ಲಿ ಅಲ್ಲಿಗೆ ರಾಜೇಶ್ವರಮ್ಮ ಬಂದು "ಬಂದವರೆಲ್ಲಾ ಈ ಸ್ಕೂಟರ್ ನೋಡದೆ ಹೋಗುವುದೇ ಇಲ್ಲ, ಕೊನೆಪಕ್ಷ ಅದರ ಮೇಲೆ ಕುಳಿತು ಫೋಟೊ ತೆಗೆಸಿಕೊಂಡಾದರೂ ಹೋಗುತ್ತಾರೆ. ಇದರಿಂದಾಗಿ ಆ ಸ್ಕೂಟರ್ಗೂ ಜೀವ ಬಂದಂತಾಗಿದೆ" ಅಂದರು. ಹೀಗೆ ತೇಜಸ್ವಿಯವರ ಬರಹಗಳು ಒಂದು ನಿರ್ಜೀವ ವಸ್ತುವಿಗೆ ಜೀವ ನೀಡಬಲ್ಲ ಶಕ್ತಿಯನ್ನು ಹೊಂದಿದ್ದವೆಂದರೆ ತಪ್ಪಾಗಲಾರದು.

ನಂತರ ತೇಜಸ್ವಿಯವರೊಡನೆ ಕಳೆದ ಸುಸಂದರ್ಭಗಳನ್ನು ನನ್ನ ಅಪ್ಪ ವರ್ಣಿಸುತ್ತಾ ಹೋದರು. ಒಂದು ಬಾರಿಯೂ ತೇಜಸ್ವಿಯವರನ್ನು ಭೇಟಿ ಮಾಡುವ ಅವಕಾಶ ನನಗೆ ಸಿಗಲಿಲ್ಲವಲ್ಲಾ ಎಂಬ ದುಃಖ ನನಗಾಗತೊಡಗಿತು.

ಮನೆಯ ಹಿಂದಿನ ಚಿಕ್ಕ ಕೊಳದಲ್ಲಿ ತೇಜಸ್ವಿಯವರು ಮೀನನ್ನು ಹಿಡಿಯುತ್ತಿದ್ದುದು ಮತ್ತು ಕೊಳದ ಮುಂದಿನ ಪುಟ್ಟ ವಿಶಾಲವಾದ ಜಾಗ, ಅಲ್ಲಿ ತೇಜಸ್ವಿ ಎಲ್ಲರೊಡನೆ ಸೇರಿ ಟೆನ್ನಿಸ್ ಆಡುತ್ತಿದ್ದುದು ಹಾಗೂ ಕೊಳದ ಸುತ್ತ ಪಕ್ಷಿಗಳ ಕಲರವ, ಮನೆಯ ಸುತ್ತಲಿನ ಹೂವಿನ ಗಿಡಗಳು, ಅದರ ಸುತ್ತಲಿನ ಕಾಡಿನ ಮರಗಳುಳ್ಳ ತೋಟ. ಈ ಎಲ್ಲವನ್ನು ಕಂಡರೆ ತೇಜಸ್ವಿಯವರಲ್ಲಿದ್ದ ವಿಶಾಲ ಮನೋಭಾವ, ನೆಮ್ಮದಿಯ ಮತ್ತು ಆನಂದದ ಜೀವನ, ಗಿಡ, ಮರ ಮತ್ತು ಪ್ರಾಣಿ ಪಕ್ಷಿಗಳಲ್ಲಿ ಅವರಿಗಿದ್ದ ಕಾಳಜಿ ಮತ್ತು ಆಸಕ್ತಿಯ ಬಗ್ಗೆ ನಮಗೆ ಅರಿವಾಗುತ್ತದೆ.

ಮನೆಯಿಂದ ನಾವು ಹೊರಡಲು ಸಿದ್ಧವಾದಾಗ ರಾಜೇಶ್ವರಿ ಅಮ್ಮ ನಮಗೆ ಉಪ್ಪು-ಕಾರ ಮತ್ತು ಮೆಣಸಿನ ಪುಡಿಯನ್ನು ಸಿಂಪಡಿಸಿದ್ದ ಬಾಳೆಕಾಯಿ ಚಿಪ್ಸನ್ನು ಕೊಟ್ಟರು. ಅವರ ಮನೆಯ ಮುಂದಿನ ಗಿಡವೊಂದರಲ್ಲಿ ಬಿಡುವ ಸುವಾಸನೆಯುಕ್ತವಾದ ಹೂ ಒಂದನ್ನು ನನ್ನ ತಂಗಿಗೆ ಕೊಟ್ಟು, 'ಮತ್ತೆ ಬನ್ನಿ' ಎಂದು ಹೇಳುತ್ತಾ 'ಸಾಧ್ಯವಾದಲ್ಲಿ ನಾನೂ ಒಮ್ಮೆ ಮೇಲುಕೋಟೆಗೆ ಬರುವೆನೆಂದು' ಹೇಳಿ ನಮ್ಮೆಲ್ಲರನ್ನು ಪ್ರೀತಿಯಿಂದ ಮತ್ತು ಸಂತೋಷದಿಂದ ಕಳುಹಿಸಿಕೊಟ್ಟರು. ಅಲ್ಲಿಂದ ಹೊರಡಲು ಮನಸ್ಸಿಲ್ಲದ ಮನಸ್ಸಿನಿಂದ ಶೃಂಗೇರಿಯೆಡೆಗೆ ಪ್ರಯಾಣ ಬೆಳೆಸಿದೆವು......

–ಸುಪ್ರಜ್ ಕೌಲಗಿ

ಸೈದ್ಧಾಂತಿಕ ಪತ್ರಿಕೆಗಳು ಮತ್ತು ಓದುಗರು

(“ಹೊಸ ಮನುಷ್ಯ” ಎಂಬುದು ಸಮಾಜವಾದಿ ವಿಚಾರದ ಸಮರ್ಥನೆಗಾಗಿ ಮತ್ತು ಪ್ರಚಾರಕ್ಕಾಗಿ ಪ್ರಕಟವಾಗುತ್ತಿದ್ದ ಮಾಸಪತ್ರಿಕೆ. ಅದರ ಸಂಪಾದಕರು ಸಮಾಜವಾದಿ ಮತ್ತು ವಿಚಾರವಾದಿ ಡಿ.ಎಸ್.ನಾಗಭೂಷಣ. ಕಳೆದ ಐದು ವರ್ಷಗಳಿಂದ ಈ ಪತ್ರಿಕೆ ಪ್ರಕಟವಾಗುತಿತ್ತು ಮತ್ತು ರಾಜ್ಯದ ಬುದ್ಧಿಜೀವಿಗಳಲ್ಲಿ ಜನಪ್ರಿಯವಾಗಿತ್ತು. ಅಂಥ ಮಾಸ ಪತ್ರಿಕೆಯನ್ನು ನಿಲ್ಲಿಸಬೇಕೆಂದು ಶ್ರೀ ನಾಗಭೂಷಣ ತಮ್ಮದೇ ಆದ ಕಾರಣಗಳಿಂದ ತೀರ್ಮಾನಿಸಿದ್ದಾರೆ. ಅದಕ್ಕೆ ಪ್ರತಿರೋಧನೆ ಅನೇಕ ಓದಿಗರು ಪ್ರತಿಕ್ರಿಯಿಸಿದ್ದಾರೆ. ಆ ಪ್ರತಿಕ್ರಿಯೆಗಳಿಗೆ ಉತ್ತರವಾಗಿ ನಾಗಭೂಷಣರವರು ಬರೆದ ವಿಚಾರಗಳು ಸರ್ವಕಾಲಿಕವಾಗಿರುವುದರಿಂದ ಮತ್ತು ಬೇರೆ ಸೈದ್ಧಾಂತಿಕ ಪ್ರತಿಕೆಗಳಿಗೂ ಅನ್ವಯಿಸುವುದರಿಂದ ಅವುಗಳನ್ನು ಜನಪದ ವಿಚಾರದ ಓದುಗರೊಂದಿಗೆ ಹಂಚಿಕೊಳ್ಳಲಾಗಿದೆ. –ಸಂ)

ಪತ್ರಿಕೆ ನಿಲ್ಲಿಸುವ ನನ್ನ ನಿರ್ಧಾರದ ಬಗ್ಗೆ ಓದುಗರಿಂದ ವ್ಯಾಪಕವಾದ ಪ್ರತಿಕ್ರಿಯೆಗಳು ಬಂದಿವೆ. ಪತ್ರಿಕೆಗೆ ಹಣಕಾಸಿನ ತೊಂದರೆ ಇಲ್ಲ. ಸಾವಿರ ಚಂದಾದಾರರಿದ್ದಾರೆ. ನಾಳೆಯೇ ಕ್ರಾಂತಿಯಾಗಿಬಿಡುತ್ತದೆ ಎಂಬ ನಿರೀಕ್ಷೆಯೆಂದೇನೂ ಆರಂಭಿಸಲಿಲ್ಲ ಬದಲಿಗೆ, ಕೆಟ್ಟ ಜಾಗತೀಕರಣದಿಂದಾಗಿ ಸುತ್ತಮುತ್ತಲ ಸಮಾಜ ತನ್ನ ಮೂಲ ಸ್ವಭಾವನ್ನೇ ಕಳೆದುಕೊಂಡು ಅಮಿತ ಸುಖ ಆಸೆಗಳ ಹಿಂದೆ ಬಿದ್ದು ಹೆಚ್ಚೆಚ್ಚು ಹಿಂಸಾತ್ಮಕವಾಗುತ್ತಾ ತನ್ನ ಆತ್ಮವನ್ನು ನಾಶಪಡಿಸಿಕೊಳ್ಳುತ್ತಿರುವಂತೆ ತೋರುತ್ತಿರುವ ಸಂದರ್ಭ. ಇದರ ವಿರುದ್ಧ ಒಂದು ಪರ್ಯಾಯ ಆಲೋಚನಾ ಕ್ರಮವನ್ನು ಸಂಘಟಿಸಲು ಸಾಧ್ಯವೇ ಎಂಬ ಪ್ರಯತ್ನವಾಗಿ ಈ ಪತ್ರಿಕೆ ಮಾಡಿದೆ. ಹೀಗೆ ಆಲೋಚಿಸುವವರ ಒಂದು ಕೂಟವು ತಾನೇ ತಾನಾಗಿ ನಿರ್ಮಿತಗೊಂಡು ಕ್ರಿಯಾಶೀಲವಾಗುತ್ತದೆ ಎಂದೂ ಭಾವಿಸಿದ್ದೆ. ಆದರೆ ಇಂಥ ಯಾವ ಸೂಚನೆಯೂ ನನಗೆ ದೊರೆತಿಲ್ಲ. ಜನ ಪತ್ರಿಕೆಗೆ ಬರೆಯುತ್ತಾರೆ. ಅಲ್ಲಿಗೆ ಮುಗಿಯಿತು ಸಮಾಜವಾದಿ ಸಂವಾದ. ಬಹಳಷ್ಟು ಓದುಗರು ಪತ್ರಿಕೆಯನ್ನು ಓದಿನ ಸುಖಕ್ಕಾಗಿ ಮಾತ್ರ ಓದುತ್ತಾರೆ ಎಂದು ನನಗನಿಸಿದೆ. ಮುಂದಿನ ಹೆಜ್ಜೆಯೇ ಇಲ್ಲ. ಜಾಗತೀಕರಣದ ಆರ್ಥಿಕ ಫಲಾನುಭವಿಗಳಾದ ಇವರಿಗೆ ಅದರ ಅಪಾಯಗಳು ಕಾಣುತ್ತಿದ್ದರೂ ಅದು ನಮ್ಮ ಮನೆ ಬಾಗಿಲ ಒಳಬರುವವರೆಗೂ ಚಿಂತೆಯ ಅಗತ್ಯವಿಲ್ಲ ಎಂದು ಭಾವಿಸಿದ್ದಾರೆ. ನನ್ನ ಭೇಟಿಯಾದಾಗ ಮಾತ್ರ ಪತ್ರಿಕೆಯ ಬರಹಗಳನ್ನು ಹೊಗಳಿದ್ದೇ ಹೊಗಳಿದ್ದು! ಇದನ್ನು ಕೇಳಿದಾಗ ನನಗಂತೂ ಇವರು ನನ್ನ ಪತ್ರಿಕೆಯ

ಮೇಲೆ ಉಗುಳಿದಂತಾಗುತ್ತದೆ. ಇವರಲ್ಲಿ ಹೆಚ್ಚಿನವರು ಸಮಾಜವಾದಿಗಳೆಂದು ಕರೆದುಕೊಂಡವರೇ. ಪರಿಸ್ಥಿತಿ ಹೀಗಿರುವಾಗ ಪತ್ರಿಕೆಯ ಮೂಲ ಉದ್ದೇಶವಾದ 'ಹೊಸ ಮನುಷ್ಯ' ಹೊಳಹನ್ನಾದರೂ ಎಲ್ಲಿ ಕಾಣುವುದು? ಸುಖವೇ ಮನುಷ್ಯನ ಪರಮೋದ್ದೇಶವಾದರೆ? ಅದಕ್ಕೊಂದು ಮಿತಿಯೇ ಬೇಡವೆಂದರೆ? ಬಡತನ ನಿವಾರಣೆ ಈ ದೇಶಕ್ಕೆ ಒಂದು ವ್ಯಸನವಾಗಿ ಹೋಗಿದೆ. ಅದರ ಹೆಸರಲ್ಲೆ ನಡೆಯುತ್ತಿರುವುದು ಕಾಲ ಕೆಳಗಿನ ನೆಲವನ್ನೇ ಅಲುಗಾಡಿಸುತ್ತಿರುವ ಅಭಿವೃದ್ಧಿ ಎಂಬ ಹುಚ್ಚಾಟ. ಇಂಥಹ ಅಭಿವೃದ್ಧಿ ಸಾಧಿಸುವ ಮಾರ್ಗದ ಬಗ್ಗೆ ಇರುವ ವ್ಯತ್ಯಾಸವಷ್ಟೇ ಈ ಕುರಿತಾದ ಕಥನ – ಸಂಕಥನಗಳನ್ನೇ ಈ ಐದು ವರ್ಷಗಳಲ್ಲಿ ಈ ಪತ್ರಿಕೆ ಹೇಳುತ್ತಾ ಹೊಸ ದರ್ಶನದ ಹೊಳಹುಗಳಿಗಾಗಿ ಹುಡುಕಾಡಿದ್ದು. ಹೆಚ್ಚಿನ ಓದುಗರು ರಸ್ತೆ ಅಪಘಾತದಲ್ಲಿ ಅರೆಜೀವವಾಗಿ ಬಿದ್ದವರನ್ನು ವೇದನೆಯನ್ನು ನೋಡಿದರೂ ಕೆಲಸಕ್ಕೆ ದಾವಿಸುವ ಒತ್ತಡದಲ್ಲಿ ತಮ್ಮ ಪಾತ್ರವೇನೂ ಇಲ್ಲವೆಂಬ ಭಾವನೆಯ ಸಮಾಧಾನದೊಂದಿಗೆ ದುಡಿಮೆಯ ತಾಣಗಳತ್ತ ಧಾವಿಸಿ ಸಂಜೆ ಆ ಭಯಾನಕ ದೃಷ್ಯವನ್ನು ತಮ್ಮ ಗೆಳೆಯರೊಂದಿಗೆ ಲೊಚ್‌ಪಚ್ ಎಂದು ಹಂಚಿಕೊಳ್ಳುತ್ತಾ ತಮ್ಮ ಮಾನವಧರ್ಮವನ್ನು ಪಾಲನೆ ಮಾಡುವಂತೆ ಪತ್ರಿಕೆಗೆ ಉದಾರವಾಗಿ ಚಂದಾ ಕೊಟ್ಟು ತಮ್ಮ ಧರ್ಮಪಾಲನೆ ಮಾಡಿದ್ದಾರೆ. ಮೂಲ ಮಾನವೀಯತೆಯನ್ನೇ ಅದುಮಿಡುವಂತಹ ಕೆಲಸಗಳಿಗೆ ಹೋಗುವ ಧಾವಂತವನ್ನು ಸೃಷ್ಟಿಸುವ ಇಂದಿನ ದುಡಿಮೆಯ ಸ್ವರೂಪ ಮತ್ತು ಧರ್ಮಪಾಲನೆಯ ರೀತಿಯನ್ನು ಸೂಚಿಸಿರುವೆ. ಇವೆಲ್ಲ ಯಾವುದರ ಪರಿಣಾಮಗಳು? ಇವರಿಗೆ ಈ ಪುರಾಣ ಹೇಳಲು ಏಕೆ ನನ್ನ ಕಾಲ ಮತ್ತು ಶಕ್ತಿಯನ್ನು ವ್ಯಯಮಾಡಿಕೊಳ್ಳಬೇಕು? ನೀವೇ ಹೇಳಿ, ಪತ್ರಿಕೆ ನಿಲ್ಲಬಾರದೆಂದು ಹೇಳುತ್ತಿರುವ ಓದುಗರೆ! ದಯವಿಟ್ಟು ಕ್ಷಮಿಸಿ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾಟ್ರಸ್ಟಿನ 'ಹೊಸ ಜೀವನ ದಾರಿ' ಕೇಂದ್ರದಲ್ಲಿ ಆಗಾಗ್ಗೆ ಶಾಲಾ ಮತ್ತು ಕಾಲೇಜ್ ವಿದ್ಯಾರ್ಥಿಗಳಿಗಾಗಿ ಶಿಬಿರಗಳು ನಡೆಯುತ್ತಿರುತ್ತವೆ. ಇತ್ತೀಚೆಗೆ ತುಮಕೂರು ಬಳಿಯ ಟಿ.ವಿ.ಎಸ್. ಕಂಪನಿಯ ಶಾಲಾ ಮಕ್ಕಳಿಗಾಗಿ ಶಿಬಿರ ನಡೆಯಿತು. ಸುಮಾರು ೩೦ ಮಕ್ಕಳು ಭಾಗವಹಿಸಿದ್ದರು.

* * *

ಬೆಂಗಳೂರಿನ ನಾಗಾರ್ಜುನ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ೩ ದಿನಗಳ ಶಿಬಿರ ನೆಡೆಯಿತು. ಶಿಬಿರದಲ್ಲಿ ವಿದ್ಯಾರ್ಥಿಗಳು ಪರಿಸರ ಮತ್ತು ನೀರಿನ ರಕ್ಷಣೆಯ ಬಗ್ಗೆ ಮತ್ತು ಸರಳ ಜೀವನದ ಅಗತ್ಯತೆಯ ಬಗ್ಗೆ ಹಲವಾರು ವಿಷಗಳನ್ನು ತಿಳಿದುಕೊಂಡರು.

* * *

ಜನಪದ ಸೇವಾಟ್ರಸ್ಟಿನ ಅಧ್ಯಕ್ಷರಾಗಿರುವ ಡಾ॥ ಮನೋಹರ್ ಅವರ ತಾಯಿಯವರು ದಿವಂಗತರಾದರು. ಜನಪದ ಸೇವಾಟ್ರಸ್ಟ ಅವರ ದುಃಖದಲ್ಲಿ ಭಾಗಿಯಾಗಿದೆ.

* * *

ತುಮಕೂರು ಜಿಲ್ಲೆಯ ಮಧುಗಿರಿ ಹೈಸ್ಕೂಲಿನ ವಿದ್ಯಾರ್ಥಿಗಳು ಅಧ್ಯಾಪಕರೊಂದಿಗೆ ಟ್ರಸ್ಟಿಗೆ ಭೇಟಿಕೊಟ್ಟರು. ಅವರೆಲ್ಲರಿಗೆ "ನೋಡಬನ್ನಿ, ನೋಡಬನ್ನಿ ನಮ್ಮಹಳ್ಳಿಯೂರ" ಎಂಬ ಗೀತೆಯನ್ನು ಹೇಳಿಕೊಡಲಾಯಿತು.

* * *

ಶಿವಮುರುಗನ್ ಮತ್ತು ತ್ಯಾಗರಾಜನ್ ಎಂಬ ಇಬ್ಬರು ಯುವಕರು ತಮಿಳುನಾಡಿನಿಂದ ಬಂದು ಟ್ರಸ್ಟಿನಲ್ಲಿ ನಡೆಯುತ್ತಿರುವ ನೇಗೈಯ ಬಗ್ಗೆ ಹೆಚ್ಚಿನ ಮಾಹಿತಿ ಪಡೆದರು ಮತ್ತು ಸ್ವತಃ ನೇಗೈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಅನುಭವ ಪಡೆದರು. ಅವರು ನೇಗೈ ಮಾಡುವ ಕುಟುಂಬದಿಂದಲೆ ಬಂದವರಾಗಿದ್ದಾರೆ. ವಿದ್ಯುತ್ ಮಗ್ಗಗಳ ಕಾರಣದಿಂದಾಗಿ ಅವನತಿ ಹೊಂದುತ್ತಿರುವ ಕೈಮಗ್ಗ ಕೈಗಾರಿಕೆಯನ್ನು ತಮ್ಮ ಪ್ರದೇಶದಲ್ಲಿ ಪುನರುಜ್ಜೀವಿಗೊಳಿಸಲು ಶಿವಮುರುಗನ್ ಮತ್ತು ನಾಗರಾಜನ್ ಬಯಸಿದ್ದಾರೆ.

* * *

ಜನಪದ ಸೇವಾಟ್ರಸ್ಟ ೬೦ರ ದಶಕದಲ್ಲಿ ನಡೆಸುತ್ತಿದ್ದ ಪಾರ್ಶ್ವವಾಯು ಪೀಡಿತ ಗ್ರಾಮಾಂತರ ಪ್ರದೇಶದ ಅಂಗವಿಕಲ ಮಕ್ಕಳಿಗಾಗಿ "ಕರುಣಾಗೃಹ"ದ ಹಳೆಯ

ವಿದ್ಯಾರ್ಥಿಗಳ ಸ್ನೇಹಕೂಟ ಮೊದಲ ಬಾರಿ ನಡೆಯಿತು. ೨೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇನ್ನೂ ಹಲವಾರು ವಿದ್ಯಾರ್ಥಿಗಳಿಗೆ ತಮ್ಮ ದೈಹಿಕ ತೊಂದರೆಯಿಂದಾಗಿ ಬರಲಾಗಲಿಲ್ಲ. ಸ್ನೇಹಕೂಟದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ತಮ್ಮ ಬಾಲ್ಯದ ಹಾಗೂ ಕಲಿಕಾ ದಿನಗಳನ್ನು ಜ್ಞಾಪಿಸಿಕೊಂಡರು. ಕರುಣಾಗೃಹ ತಮ್ಮ ಜೀವನವನ್ನು ಹೇಗೆ ರೂಪಿಸಿತು ಎಂಬ ಬಗ್ಗೆ ಹೃದಯಂಗಮವಾಗಿ ಮಾತನಾಡಿದರು. ಎಲ್ಲರಿಗೂ "ಅಮ್ಮ" ಆಗಿದ್ದ ಗಿರಿಜಮ್ಮನವರನ್ನು ನೆನೆದು ದುಃಖಪಟ್ಟರು. ಪ್ರತಿವರ್ಷವೂ ಈ ರೀತಿಯ ಸ್ನೇಹಕೂಟ ನಡೆಯಬೇಕು ಮತ್ತು ಅದರಲ್ಲಿ ಅವರವರ ಪತ್ನಿಯರು ಮತ್ತು ಮಕ್ಕಳು ಸಹ ಭಾಗವಹಿಸಬೇಕೆಂದು ಅವರೆಲ್ಲರು ತೀರ್ಮಾನಿಸಿದ್ದರು. ನರಸಿಂಹ ಅವರು ಗಿರಿಜಮ್ಮನವರ ಬಗ್ಗೆ ಬರೆದ ಸ್ವರಚಿತ ಕವನವನ್ನು ಸುಶ್ರಾವ್ಯವಾಗಿ ಹಾಡಿ ಎಲ್ಲರ ಮನವನ್ನು ಕಲಕಿದರು.

ಅಮ್ಮ

ಧನ್ಯ ಜೀವಿಯೇ ಪುಣ್ಯ ಶಾಲಿಯೇ
ಎಲ್ಲಿಗೆ ನೀ ಹೋದೆ
ದಾದನ ಬಾಳಲಿ ಬೆಳಕನು ತುಂಬಿ
ಎಲ್ಲಿ ಮರೆಯಾದೆ

ಕಾಣದ ಲೋಕಕ್ಕೆ ಬಾರದ ಲೋಕಕ್ಕೆ
ಏತಕ್ಕೆ ನೀ ಹೋದೆ
ಅಮ್ಮ ಎಂಬ ಕರುಳಿನ ಕರೆಗೆ
ಬಾರದ ತಾಯಾದೆ ॥ಧನ್ಯ॥

ಕರುಣೆಯ ಕಡಲು ನಿನ್ನಯ ಒಡಲು
ಒಲುಮೆಯ ನಮ್ಮಮ್ಮ
ಎಲ್ಲರ ಮರೆತು ದೂರಕ್ಕೆ ಸಾಗಲು
ಕಾರಣವೇನಮ್ಮ ॥ಧನ್ಯ॥

ಅಂಗವಿಕಲರ ಅಳುಕಿನ ಬಾಳಿಗೆ
ಬಲವನ್ನು ನೀ ತುಂಬಿ
ವಿಶಾಲ ವಿಶ್ವದಿ ಬಾಳಿರಿ ಎಂದು
ದೈವವ ನೀ ನಂಬಿ ॥ಧನ್ಯ॥

ಅನ್ನವ ನೀಡಿ ಅಕ್ಕರೆ ತೋರಿ
ಅಕ್ಷರ ನೀ ಕಲಿಸಿ
ಮಕ್ಕಳ ಹೃದಯದಿ ಕನಸುಗಳರಳಿಸಿ
ನಗುತಲೀ ನೀ ಹರಸಿ ॥ಧನ್ಯ॥

ಬ್ರಹ್ಮನ ತಾಣದ ಸಗ್ಗದ ಸಿರಿಯ
ನಂದನ ಹೂ ಬನದೇ
ಮಿನುಗಿಹೆ ನೀನು ತಾರೆಯ ತೆರದಲಿ
ಅರಳಿದ ಹೂವಾದೆ ॥ಧನ್ಯ॥

–ನರಸಿಂಹ

ಸರ್ವೋದಯ ಆಂದೋಲನ ಮುನ್ನಡೆ

೨೦೧೬ರ ನವೆಂಬರ್ ಮಾಹೆಯ ೫ ಮತ್ತು ೬ನೇ, ದಿನಾಂಕಗಳಲ್ಲಿ ಮಂಡ್ಯ ಜಿಲ್ಲೆ ಮೇಲುಕೋಟೆಯಲ್ಲಿ ಕರ್ನಾಟಕ ರಾಜ್ಯ ಪ್ರಥಮ ಸರ್ವೋದಯ ಸಮಾಜ ಸಮ್ಮೇಳನವನ್ನು ಆಯೋಜಿಸಲಾಗಿದೆ. ಈ ಸಮ್ಮೇಳನವನ್ನು ಅಹಮದಾಬಾದ್‌ನಲ್ಲಿರುವ ಗುಜರಾತ್ ವಿದ್ಯಾಪೀಠದ ಉಪಕುಲಪತಿಗಳಾಗಿದ್ದ ಕರ್ನಾಟಕದವರೇ ಆದ ಸರ್ವೋದಯ ಮತ್ತು ಗಾಂಧೀ ವಿಚಾರ ಚಿಂತಕರಾದ ಶ್ರೀ ಸುದರ್ಶನ್ ಅಯ್ಯಂಗಾರರವರು ಉದ್ಘಾಟಿಸಲಿದ್ದಾರೆ. ಸಮ್ಮೇಳನದ ಅಧ್ಯಕ್ಷತೆಯನ್ನು ಅಖಿಲ ಭಾರತ ಸರ್ವೋದಯ ಮಂಡಲದ ಅಧ್ಯಕ್ಷರಾದ ಶ್ರೀ ಮಹದೇವ ವಿದ್ರೋಹಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಖಿಲ ಭಾರತ ಸರ್ವೋದಯ ಸಮಾಜ ಸಮ್ಮೇಳನದ ಸಂಯೋಜಕರಾದ ಶ್ರೀ ಆದಿತ್ಯ ಪಟ್ನಾಯಕ್ ಮತ್ತು ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷೆಯಾದ ರಾಧಾಭಟ‌ರ್ ಆಗಮಿಸಲಿದ್ದಾರೆ. ರಾಜ್ಯ ಮತ್ತು ರಾಷ್ಟ್ರ ಎದುರಿಸುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳಿಗೆ ಸರ್ವೋದಯ ಸಿದ್ಧಾಂತದಲ್ಲಿರಬಹುದಾದ ಪರಿಹಾರ ಮಾರ್ಗವನ್ನು ಜನತೆಗೆ ತಿಳಿಸುವುದೇ ಸಮ್ಮೇಳನದ ಉದ್ದೇಶ ಆಗಿದೆ. ಸಮ್ಮೇಳನದಲ್ಲಿ ಆಯಾ ವಿಷಯ ತಜ್ಞರು ವಿಷಯವನ್ನು ಮಂಡಿಸಲಿದ್ದಾರೆ. ಸೂಕ್ತ ವ್ಯಕ್ತಿಗಳು ಅಧ್ಯಕ್ಷತೆ ವಹಿಸಲಿದ್ದಾರೆ. ಸುಮಾರು ಐದುನೂರು ಜನರು ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಯಾರಿಗೆ ಗಾಂಧೀ ಪ್ರತಿಪಾದಿಸಿದ್ದ ಸತ್ಯ ಮತ್ತು ಅಹಿಂಸೆಯಲ್ಲಿ ನಂಬಿಕೆ ಇದೆಯೋ ಮತ್ತು ಯಾರಿಗೆ ಸರ್ವೋದಯ ಸಮಾಜದ ರಚನೆಯ ಅಗತ್ಯತೆಯ ಬಗ್ಗೆ ಆಸಕ್ತಿ ಇದೆಯೋ ಅಂಥವರೆಲ್ಲರೂ ಈ ಸಮ್ಮೇಳನದಲ್ಲಿ ಭಾಗವಹಿಸಬಹುದಾಗಿದೆ.

*   *   *

ಇತ್ತೀಚೆಗೆ ಅರಸೀಕೆರೆಯಲ್ಲಿ ಸರ್ವೋದಯ ಕಾರ್ಯಕರ್ತರ ಶಿಬಿರ ನಡೆಯಿತು. ಸುಮಾರು ೨೨ ಜನ ಕಾರ್ಯಕರ್ತರು ಭಾಗವಹಿಸಿದ್ದರು. ಶಿಬಿರದಲ್ಲಿ ಸಮ್ಮೇಳನದ ವಿಷಯವಾಗಿ ಮತ್ತು ಸಂಘಟನೆಯ ವಿಷಯವಾಗಿ ಹಾಗೂ ಸರ್ವೋದಯ ಆಂದೋಲನದ ಬಲಪಡಿಸು ವಿಷಯವಾಗಿ ಚರ್ಚೆ ನಡೆಯಿತು. ಪ್ರತಿಯೊಂದು ಜಿಲ್ಲಾ ಸಂಘಟನೆ ತಮ್ಮ ತಮ್ಮ ಜಿಲ್ಲೆಯಿಂದ ನಿಗದಿಪಡಿಸಲಾಗುವ ಹಣವನ್ನು ಸಂಗ್ರಹಿಸಿ ಸಮ್ಮೇಳನದ ಖರ್ಚಿಗಾಗಿ ಕಳುಹಿಸಿಕೊಡಬೇಕೆಂದು ಅಭಿಪ್ರಾಯ ಪಡಲಾಯಿತು. ಕರ್ನಾಟಕ ರಾಜ್ಯ ಸರ್ವೋದಯ ಮಂಡಲವನ್ನು ಪುನರ್ ರಚಿಸುವ ಸಾಧ್ಯತೆಯ ಬಗ್ಗೆಯೂ ಚರ್ಚಿಸಲಾಯಿತು.

* ಶಿಬಿರಾರ್ಥಿಗಳೆಲ್ಲರೂ ಸಕ್ರಿಯವಾಗಿ ಚರ್ಚೆಯಲ್ಲಿ ಭಾಗವಹಿಸಿದ್ದರು.

*   *   *

* ಪ್ರತಿವರ್ಷದಂತೆ ರಾಷ್ಟ್ರಮಟ್ಟದಲ್ಲಿ ಯುವಕರ ಶಿಬಿರವು ಅಸ್ಸಾಂ ರಾಜ್ಯದ ಡಿಬ್ರುಘಡದಲ್ಲಿ ಆಯೋಜಿಸಲಾಗಿದೆ. ಈ ಶಿಬಿರವು ಸೆಪ್ಟಂಬರ್ ೧೧ರಿಂದ ೧೪ರವರೆಗೆ ನಡೆಯುವದು. ಈ ಶಿಬಿರದಲ್ಲಿ ೧೪ರಿಂದ ೩೪ ವರ್ಷದೊಳಗಿನ ಯುವಕ-ಯುವತಿಯರು ಭಾಗವಹಿಸಬಹುದಾಗಿದೆ. ಆಸಕ್ತ ಯುವಕರು ಈ ಕೆಳಗೆ ಕಾಣಿಸಿದ ವಿಳಾಸವನ್ನು ಸಂಪರ್ಕಿಸಬಹುದು:-

ಸರ್ವ ಸೇವಾ ಸಂಘ,
ಮಹದೇವಭಾಯಿ ಭವನ
ಸೇವಾಗ್ರಾಮ -೪೪೨೧೦೨
ಪೋ:-೦೭೧೫೨-೨೮೪೦೬೧-೨೮೪೯೬೧

ಸುರೇಂದ್ರ ಕೌಲಗಿ, ಅಧ್ಯಕ್ಷರು
ಕರ್ನಾಟಕ ಸರ್ವೋದಯ ಮಂಡಲ
ಮೇಲುಕೋಟೆ,, ೯೧೪೧೭೦೦೮೧೨

ನಾಲ್ಕು ನಿಟ್ಟಿನಿಂದ....

ಭಿಕ್ಷುಕ ದೇಶ

ಮಂತ್ರಿ ಮಂಡಲದಲ್ಲಿ ತನಗೆ ಯಾರಿಂದ ತೊಂದರೆಯಾಗಬಹುದು ಎಂದು ನಾಯಕನು ಭಾವಿಸುತ್ತಾನೋ ಅವರಿಗೆ ಉಡುಗೊರೆವಂಥ ಅಧಿಕಾರಗಳನ್ನು ನೀಡುತ್ತಾನೆ. ಭಿಕ್ಷುಕ ಮನಸ್ಸಿನ ಪ್ರಜೆಗಳಿಗೆ ಆಕರ್ಷಕ ದಿನ ಬಳಕೆಯ ವಸ್ತುಗಳನ್ನು ಮತ್ತು ಅವರು ಆಸೆಪಡುವ ಆಧುನಿಕ ಸಾಧನ ಸಾಮಗ್ರಿಗಳನ್ನು ನೀಡುತ್ತಾನೆ. ಅವನ ಮುಷ್ಠಿಯಲ್ಲಿರುವ ರಾಜ್ಯ "ಭಿಕ್ಷುಕ ದೇಶ"ವಾಗುತ್ತದೆ. ಎಲ್ಲರೂ ಭಿಕ್ಷುಕರಾಗುವುದರಲ್ಲಿಯೇ ಸುಖ ಸಂತೋಷ ಕಾಣುತ್ತಾರೆ. ಈ ರೀತಿ ಕ್ರಿಯಾಶೀಲತೆಯನ್ನು ಕಳೆದುಕೊಂಡಿರುವ ಜನರನ್ನು ಹೇಗೆ ಬೇಕಾದರೂ ಆಳಬಹುದು.

– ಕೆ.ಟಿ. ಗಟಿ

ಲೋಕನೀತಿ

ಇನ್ನು ಮೇಲೆ ಸಂಕುಚಿತ ಅಥವಾ ರಾಷ್ಟ್ರೀಯ ರಾಜನೀತಿ ನಡೆಯುವುದಿಲ್ಲ, ವಿಶ್ವರಾಜನೀತಿ ನಡೆಯುವುದು. ಅರ್ಥಾತ್, ಇನ್ನು ಮೇಲೆ "ಜೈ ಜಗತ್"ತ್ತಿನ ರಾಜನೀತಿ ನಡೆಯುವುದು. ಇಂದಿನ ಪಕ್ಷದ ರಾಜನೀತಿ ಚೂರುಚೂರು ಆಗುವದು. ಆದ್ದರಿಂದ ರಾಜನೀತಿಯ ವಿಚಾರವನ್ನು ಭಿನ್ನ ರೀತಿಯಲ್ಲಿ ಮಾಡಬೇಕಾಗುವದು. ವಿಶ್ವವ್ಯಾಪಕ ರಾಜನೀತಿಯ ವಿಚಾರ ಮಾಡಬೇಕು. ಇಂಥ ವ್ಯಾಪಕ, ವಿಶಾಲ ರಾಜನೀತಿಯನ್ನು ನಾನು ಲೋಕನೀತಿ ಎಂದೆನ್ನುತ್ತೇನೆ. ಅದರಲ್ಲಿ ಇಡೀ ವಿಶ್ವ ಒಂದು, ನಾವೆಲ್ಲರೂ ಅದರ ನಾಗರೀಕರು.

– ವಿನೋಬಾ

ಹರಾಮ ರಾಜ್ಯ

ನಾವು ಪಶ್ಚಿಮವನ್ನು ಅಂಧಾನುಕರಣೆ ಮಾಡಿದ್ದೇವೆ. ಆದ್ದರಿಂದ ಸ್ವರಾಜ್ಯದಿಂದ ಗಾಂಧೀ ಕಲ್ಪನೆಯ ರಾಮರಾಜ್ಯ ಪ್ರಕಟಗೊಳ್ಳೂವುದರ ಬದಲು ಹರಾಮರಾಜ್ಯ ನಿರ್ಮಾಣವಾಗಿದೆ. ಏಕೆಂದರೆ ಇಂದು ಅತ್ಯಂತ ಕಡಿಮೆ ಕೆಲಸ ಮತ್ತು ಅತ್ಯಂತ ಹೆಚ್ಚು ವೇತನವೆಂಬುದು ಹೆಚ್ಚು ಜನರ ಮಂತ್ರವಾಗಿದೆ, ಇದು ಸೋಮಾರಿತನ. ಮಣ್ಣು ದೂಷಿತವಾಗಿದೆ, ನೀರು ದುರ್ಲಭವಾಯಿತು, ಗಾಳಿ ಕೆಡುವುದರೊಂದಿಗೆ ರಾಷ್ಟ್ರದ ಏಕಾತ್ಮತೆ ಮತ್ತು ಶಾಂತಿ ಭಂಗವಾದವು.

– ಪ್ರೊ|| ಠಾಕೂರ್‌ದಾಸ್ ಭಂಗ್

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ ದೃಶ್ಯ ಟ್ರಸ್ಟ್(ರಿ) – ಮೇಲುಕೋಟೆ, ಶ್ರೀ ಎಮ್.ಎಸ್ ಆಚಾರ್ – ಬೆಂಗಳೂರು
ಶ್ರೀ ವಿರೂಪಾಕ್ಷ ಸಿ ಮಾಂಗನೂರೆ – ಬೆಳಗಾವಿ, ಶ್ರೀ ಕೆ.ಬಿ. ಸುರೇಶ್ – ಬಳ್ಳಾರಿ
ಶ್ರೀ ಮುಕ್ತುಂಸಾಬ್ – ಬೆಳಗಾವಿ, ಶ್ರೀ ಎಸ್. ಮಂಜುನಾಥ್ –HD ಕೋಟೆ
ಶ್ರೀ ಹೇಮಂತ್ ಕುಮಾರ್ – ಸಕಲೇಶಪುರ, ಶ್ರೀ ಬಿ.ಎಸ್. ಸುರೇಶ್ – ಕುಶಾಲನಗರ
ಶ್ರೀ ಬೆಟ್ಟಯ್ಯ – ಮಳವಳ್ಳಿ , ಶ್ರೀ ರಮೇಶ್ ರಾಜು – ಚನ್ನಪ್ಪನ ದೊಡ್ಡಿ

ನವೀಕರೀಸಿದ ಚಂದಾದಾರರು

ಶ್ರೀ ಟಿ.ಜಿ.ಸತ್ಯನಾರಾಯಣ – ತಗಡೂರು, ಶ್ರೀ ಎ ಎಚ್.ಚನ್ನೇಗೌಡ – ಅರಕೆರೆ ಶ್ರೀ ಗಿರಿಜಾ ಶಾಸ್ತ್ರಿ – ಠಾಣಾ, ಶ್ರೀ ಜಿ.ಎಲ್.ಕುಮಾರ, ಶ್ರೀ ಎಮ್.ಕೆ.ನಾರಾಯಣ, ಶ್ರೀ ಕರ್ನಾಟಕ ಸರ್ವೋದಯ ಸಂಘ – ಬೆಂಗಳೂರು, ಶ್ರೀ ಕುಥಣಿ ವೈ.ಎಸ್ – ಹಾವೇರಿ, ಶ್ರೀ ಚನ್ನಪ್ಪ ಎಸ್ – ಮೈಸೂರು, ಪ್ರೋ॥ ಎಮ್.ಜಿ.ಬಸವರಾಜು – ಮೈಸೂರು, ಶ್ರೀ ಟಿ.ಎನ್ ಕುಮಾರಸ್ವಾಮಿ – ಅನೇಕಲ್, ಶ್ರೀ ಎಚ್.ಎನ್.ಎಸ್ ರಾವ್ – ಮಣಿಪಾಲ್, ಶ್ರೀ ಕೆ. ನಾಗಪ್ಪ – ಮದ್ದೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ.....

Mr Raghu K C
Managing Director, Pristine Organics
pvt ltd #44/2A, Kodigehalli Gate, NH7,
Sahakarnagar Post
Bangalore - 560092

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237